ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಫೆಬ್ರವರಿ 2026 ಮಾಸ ಪತ್ರಿಕೆ

ಸಂಪುಟ/Volume : 48
ಸಂಚಿಕೆ/Issue : 5
ಪುಟ/Pages : 12
ಬೆಲೆ/Price : ₹ 15/–

Akhila Karnataka Shikshaka Samachar | February 2026 | Monthly




A Journal of Karnataka Rajya Madhyamika Shikshaka Sangha (R.)

# ಸಂಪಾದಕೀಯ

ಆತ್ಮೀಯರೇ,

ಪ್ರತೀ ವರ್ಷ ಮಾಘ ಮಾಸದ ಕೃಷ್ಣಪಕ್ಷ ಚತುರ್ದಶಿಯಂದು ಮಹಾಶಿವರಾತ್ರಿಯಂದು ದೇಶದಾದ್ಯಂತ ಶ್ರದ್ಧಾಭಕ್ತಿಯಿಂದ ಆಚರಣೆ ಮಾಡಲಾಗುತ್ತದೆ. ಶಿವರಾತ್ರಿಯು ಶಿವನಿಗೆ ಅತ್ಯಂತ ಪ್ರಿಯವಾದ ದಿನವಾಗಿದೆ. ಅಂದು ಶಿವಲಿಂಗಕ್ಕೆ ಜಲ, ಕ್ಷೀರ, ಬಿಲ್ವಪತ್ರೆ, ಶ್ರೀಗಂಧ ಮತ್ತು ಹಲವು ವಿಧದ ಪುಷ್ಪಗಳಿಂದ ಭಕ್ತಿಪೂರ್ವವಾಗಿ ಭಕ್ತರು ಪೂಜೆ ಮಾಡುವ ಮೂಲಕ ಶಿವನ ಕೃಪೆಗೆ ಪಾತ್ರರಾಗುತ್ತಾರೆ. ಅಲ್ಲದೆ ಶಿವರಾತ್ರಿಯ ದಿನ ಎಲ್ಲಾ ಭಕ್ತರು ಉಪವಾಸವಿದ್ದು, ರಾತ್ರಿ ಇಡೀ ಜಾಗರಣೆಯ ಮೂಲಕ ಶಿವನಾಮ ಸ್ಮರಣೆಯನ್ನು ಮಾಡುತ್ತಾರೆ. ಶಿವನು ಭಕ್ತರನ್ನು ಅನುಗ್ರಹಿಸುತ್ತಲೇ ಇರುತ್ತಾನೆ. ಆದ್ದರಿಂದ "ಶಿವಭಕ್ತನಿಗೆ ನರಕಾ ಇಲ್ಲ" ಎಂಬ ಪ್ರತೀತಿ ಇದೆ.

ಛತ್ರಪತಿ ಶಿವಾಜಿ ಮಹಾರಾಜರು ಮರಾಠಾ ಸಾಮ್ರಾಜ್ಯ ಸ್ಥಾಪಕರು. ಇವರು ವೀರ ಯೋಧ ಮತ್ತು ಉತ್ತಮ ಆಡಳಿತಗಾರರಾಗಿದ್ದರು. ಮೊಘಲರ ಜೊತೆಯಲ್ಲಿ ದೇಶದ ಸ್ವತಂತ್ರಕ್ಕಾಗಿ ಹೋರಾಡಿದ ಮಹಾನ್ ಧೈರ್ಯಶಾಲಿ. ಶಿವಾಜಿಯು ಶ್ರೇಷ್ಠ ರಾಜನಾಗಲು ತಾಯಿ ಜೀಜಾಬಾಯಿ ಹಾಗೂ ಗುರು ಸಮರ್ಥ ರಾಮದಾಸರು ಕಾರಣೀಕರ್ತರಾಗಿದ್ದಾರೆ. ಹಿಂದೂಸ್ಥಾನದಲ್ಲಿ ಶಿವಾಜಿ ಹಿಂದೂ ಹೃದಯ ಸಾಮ್ರಾಟ್ ಎಂದು ಜನಮಾನಸದಲ್ಲಿ ಖ್ಯಾತಿಯನ್ನು ಪಡೆದಿದ್ದರು. ಶಿವಾಜಿ ಮಹಾರಾಜರ ಜಯಂತಿಯ ಈ ಸಂದರ್ಭದಲ್ಲಿ ನಾವು ಇನ್ನೂ ಹೆಚ್ಚು ವಿಷಯಗಳನ್ನು ಶಿವಾಜಿಯ ಕುರಿತು ಅಧ್ಯಯನ ಮಾಡಿ ಮುಂದಿನ ಪೀಳಿಗೆಗೆ ವಿಚಾರಗಳನ್ನು ತಿಳಿಸುವುದು ನಮ್ಮ ಕರ್ತವ್ಯವಲ್ಲವೇ?

ರಾಮಕೃಷ್ಣ ಪರಮಹಂಸರು 19ನೇ ಶತಮಾನದಲ್ಲಿ ಹಿಂದೂ ಧರ್ಮದ ಪುನರುಜ್ಜೀವನಕ್ಕಾಗಿ ಎಲ್ಲರಿಗೂ ಪಥವನ್ನು ತೋರಿದ ಪ್ರಮುಖ ಧಾರ್ಮಿಕ ಚಿಂತಕರಾಗಿದ್ದರು. ಕಾಳಿ ಮಾತೆಯ ಆರಾಧಕರಾಗಿದ್ದ ಪರಮಹಂಸರು ಅದ್ವೈತ ವೇದಾಂತ ಸಿದ್ಧಾಂತವನ್ನು ಪ್ರತಿಪಾದಿಸಿದ ಮಹನೀಯರು. ಆದರೆ ಇವರ ಜೀವನ ದ್ವೈತ, ಅದ್ವೈತ ಮತ್ತು ವಿಶಿಷ್ಟಾದ್ವೈತಗಳ ತ್ರಿವೇಣಿ ಸಂಗಮದಂತಿತ್ತು. ರಾಮಕೃಷ್ಣರಿಗೆ ಶ್ರೇಷ್ಠ ಶಿಷ್ಯರ ಬಳಗವಿದ್ದು, ಅವರಲ್ಲಿ ಒಬ್ಬರಾದ ಮಹೇಂದ್ರನಾಥರು ರಾಮಕೃಷ್ಣರ ಜೀವನ ಮತ್ತು ಬೋಧನೆಗಳನ್ನು ದಾಖಲಿಸಿದ್ದಾರೆ. ರಾಮಕೃಷ್ಣರ ಪರಮಾಪ್ತ ಶಿಷ್ಯರಾದ ಸ್ವಾಮಿ ವಿವೇಕಾನಂದರು ಲೋಕಕಲ್ಯಾಣಕ್ಕಾಗಿ ರಾಮಕೃಷ್ಣ ಮಿಷನ್ ಸಂಸ್ಥೆಯನ್ನು ಇವರ ಗೌರವಾರ್ಥಕವಾಗಿಯೂ ಸ್ಥಾಪಿಸಿದ್ದಾರೆ. ಇಂತಹ ಮಹಾನ್ ಸಾಧಕರಾದ ಪರಮಹಂಸರಿಗೆ ಶತ ಶತ ನಮನಗಳು.

ನಮ್ಮ ಭಾರತದಲ್ಲಿ ಸರ್ ಸಿ.ವಿ ರಾಮನ್‌ರವರ ಸವಿ ನೆನಪಿಗಾಗಿ ಪ್ರತಿ ವರ್ಷ ಫೆಬ್ರವರಿ 28ರಂದು ರಾಷ್ಟ್ರೀಯ ವಿಜ್ಞಾನ ದಿನಾಚರಣೆಯನ್ನು ಆಚರಿಸಲಾಗುತ್ತಿದೆ. ಲಾಲ್ ಬಹದ್ದೂರ್ ಶಾಸ್ತ್ರೀಯವರು "ಜೈ ಜವಾನ್ ಜೈ ಕಿಸಾನ್" ಎಂಬ ಘೋಷ ವಾಕ್ಯವನ್ನು ದೇಶಕ್ಕೆ ನೀಡಿದರು. ಇದರ ಜೊತೆಯಲ್ಲಿ ನಮ್ಮ ದೇಶ ಕಂಡ ಅಪ್ರತಿಮ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿರವರು 'ಜೈ ವಿಜ್ಞಾನ್' ಎಂಬ ಘೋಷವಾಕ್ಯವನ್ನು ಜೋಡಿಸಿದರು. ಹೀಗೆ ನಮ್ಮ ಭಾರತದ ಸಾಧಕರ ಸಾಧನೆಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಿ ಆತ್ಮವಿಶ್ವಾಸವನ್ನು ಹೆಚ್ಚಿಸುವುದು ಶಿಕ್ಷಕರಾದ ನಮ್ಮೆಲ್ಲರ ಕರ್ತವ್ಯವಾಗಿದೆ.

ಸಂಪಾದಕ


## ಸಂಪಾದಕ ಮಂಡಳಿ

ಗೌರವ ಸಂಪಾದಕರು
ಹೆಚ್. ನಾಗಭೂಷಣರಾವ್

ಪ್ರಧಾನ ಸಂಪಾದಕರು ಮತ್ತು ಪ್ರಕಾಶಕರು
ಜೆ. ಎಮ್. ಜೋಶಿ

ವ್ಯವಸ್ಥಾಪಕ ಸಂಪಾದಕರು
ಸಂದೀಪ ಬೂದಿಹಾಳ

ಗೌರವ ಸಲಹೆಗಾರರು
ಚಿದಾನಂದ ಆ. ಪಾಟೀಲ
ಮಮತಾ ಡಿ. ಕೆ.

ಸಂಪಾದಕ ಮಂಡಳಿ
ಎನ್. ನಾಗರಾಜ್
ನಂ. ನಾಗಲಕ್ಷ್ಮಿ
ಸೀತಾಲಕ್ಷ್ಮಿ ಆರ್.

ವಿನ್ಯಾಸಕಾರರು
ಪ್ರೇರಣಾ

ಕಛೇರಿ ವ್ಯವಸ್ಥಾಪಕರು
ವರಲಕ್ಷ್ಮಿ ಕೆ. ಎನ್.


## ಪರಿವಿಡಿ


- ಶ್ರೀ ರಾಮಕೃಷ್ಣ ಪರಮಹಂಸರ ಶೈಕ್ಷಣಿಕ ವಿಚಾರಧಾರೆ – ಡಾ॥ ಲೋಕೇಶ್ 3
- ಶಿವರಾತ್ರಿಯ ಮಹಿಮೆ – ನಂ. ನಾಗಲಕ್ಷ್ಮಿ 4
- ರಾಷ್ಟ್ರೀಯ ವಿಜ್ಞಾನ ದಿನ – ಶ್ರೀಧರ ಪಾಟೀಲ ಕುಲಕರ್ಣಿ 5
- ಛತ್ರಪತಿ ಶಿವಾಜಿ – ಶ್ರೀಮತಿ ಲಕ್ಷ್ಮೀಸಿಂಗ್ ಬಿ. 7
- ಕಲಬುರಗಿ ಜಿಲ್ಲಾ ಘಟಕ ವತಿಯಿಂದ ಡಿಡಿಪಿಐಗೆ ಮನವಿ 8
- ಕೇಂದ್ರ ಶಿಕ್ಷಣ ಸಚಿವರನ್ನು ಭೇಟಿ ಮಾಡಿದ ABRSM ನಿಯೋಗ 9
- ಸಂಕಲ್ಪ ದಿನಾಚರಣೆ–ಬೆಂಗಳೂರು ಉತ್ತರ ಜಿಲ್ಲೆ 11
- ದಿನದರ್ಶಿಕೆ ಬಿಡುಗಡೆ ಕಾರ್ಯಕ್ರಮ – ಬೀದರ್ 12

# ಶ್ರೀ ರಾಮಕೃಷ್ಣ ಪರಮಹಂಸರ ಶೈಕ್ಷಣಿಕ ವಿಚಾರಧಾರೆ

**ಡಾ|| ಲೋಕೇಶ್**
**ಶಿಕ್ಷಣತಜ್ಞ & ಚಿಂತಕರು**
**ಎನ್.ಎಂ.ಕೆ.ಆರ್.ವಿ ಕಾಲೇಜು**
**ಜಯನಗರ, ಬೆಂಗಳೂರು**
**ಮೊಬೈಲ್ ಸಂಖ್ಯೆ–9483150527**



ಶ್ರೀ ರಾಮಕೃಷ್ಣ ಪರಮಹಂಸರು ಕೇವಲ ಭಾರತ ಮಾತ್ರವಲ್ಲದೆ ಜಗತ್ತು ಕಂಡ ಮಹಾನ್ ಆಧ್ಯಾತ್ಮಿಕ ಸಂತರು. ಮಹಾಮಹಿಮ ಯುಗಾವತಾರಿಗಳಾದ ಶ್ರೀ ರಾಮಕೃಷ್ಣ ಪರಮಹಂಸರು ಜನಿಸಿದ ದೈವಿಕ ನೆಲವೇ ಭಾರತ. ಆಧ್ಯಾತ್ಮಿಕ ಲೋಕದ ಯುಗಪುರುಷ, ಕಲಿಯುಗದಲ್ಲಿನ ದೇವರ ಅವತಾರವೆಂದೇ ಪರಿಗಣಿಸಲ್ಪಡುವ ಶ್ರೀರಾಮಕೃಷ್ಣ ಪರಮಹಂಸರನ್ನು ಪಡೆದ ಭಾರತ ಮತ್ತು ಭಾರತೀಯರೇ ಪುಣ್ಯವಂತರೆಂದರೆ ಅತಿಶಯೋಕ್ತಿಯಲ್ಲ. ಶ್ರೀ ರಾಮಕೃಷ್ಣ ಪರಮಹಂಸರು 1836ರಂದು ಅವಿಭಜಿತ ಬ್ರಿಟೀಷ್ ಭಾರತದ ಬಂಗಾಲ ಪ್ರಾಂತ್ಯದ ಕಾಮಾರ್ಪುಕುರ್ ಗ್ರಾಮದಲ್ಲಿ ಜನಿಸಿದರು. ಇವರ ಮೂಲ ನಾಮಧೇಯ ಗದಾಧರ ಚಟ್ಟೋಪಾಧ್ಯಾಯ. ಬಾಲ್ಯದಿಂದಲೇ ಅಪಾರ ದೈವಭಕ್ತಿಯನ್ನು ಮೈಗೂಡಿಸಿಕೊಂಡಿದ್ದ ಗದಾಧರ ಧ್ಯಾನದಲ್ಲಿ ತಲ್ಲೀನತೆ ಹೊಂದುತ್ತಿದ್ದ, ತಾರುಣ್ಯಾವಸ್ಥೆಯಷ್ಟರಲ್ಲಿ ಕಲ್ಕತ್ತಾದ ದಕ್ಷಿಣೇಶ್ವರದ ಜಗನ್ಮಾತೆ ಕಾಳಿ ಮಂದಿರದ ಅರ್ಚಕರಾಗಿ ನಿಯುಕ್ತಿಗೊಂಡ ಸನ್ನಿವೇಶ ಸಾಮಾನ್ಯ ಗದಾಧರ ಚಟ್ಟೋಪಾಧ್ಯಾಯನನ್ನು ಒಬ್ಬ ಅಸಮಾನ್ಯ ಯುಗಪ್ರವರ್ತಕ ಶ್ರೀರಾಮಕೃಷ್ಣ ಪರಮಹಂಸರನ್ನಾಗಿ ಮನ್ವಂತರಗೊಳಿಸಿ ಆಧ್ಯಾತ್ಮಿಕ ಜಗತ್ತಿನ ಮೇರು ಶಿಖರವನ್ನಾಗಿಸಿತ್ತು. ಶ್ರೀರಾಮಕೃಷ್ಣ ಪರಮಹಂಸರು ತಮ್ಮ ಅಮೂಲ್ಯ ಜೀವಿತಾವಧಿಯಲ್ಲಿ ಹಿಂದೂ, ಕ್ರಿಶ್ಚಿಯನ್ ಮತ್ತು ಇಸ್ಲಾಂ ಧರ್ಮಗಳನ್ನು ಪ್ರಾಯೋಗಿಕವಾಗಿ ಅನುಸರಿಸಿ ಎಲ್ಲಾ ಧರ್ಮಗಳ ಅಂತಿಮ ಸತ್ಯವನ್ನು ಅರಿತಿದ್ದರು. ಶ್ರೀರಾಮಕೃಷ್ಣ ಪರಮಹಂಸರ ಪ್ರಕಾರ ಒಬ್ಬನೇ ದೇವರನ್ನು ಕಾಣಲು ಇರುವ ವಿಭಿನ್ನ ಪಥಗಳೇ ಧರ್ಮಗಳು ಎಂಬುದನ್ನು ಜಗಜ್ಜಾಹಿರಗೊಳಿಸಿದ್ದರು. ಧರ್ಮ ಸಾಕ್ಷಾತ್ಕಾರದ ತತ್ಪರಿಣಾಮ ಧರ್ಮ, ಸಮಾನತೆ, ಮಾನವ ಸೇವೆಯೇ ದೇವ ಸೇವೆ, ಪ್ರೀತಿ, ತ್ಯಾಗ, ಸಹಾನುಭೂತಿಗಳನ್ನು ತಮ್ಮ ಸರಳ ಮಾತು ಅದ್ಭುತ ದೃಷ್ಟಾಂತದ ವಿಶದೀಕರಣವನ್ನು ಲೋಕಕ್ಕೆ ಬೋಧಿಸಿದರು.

ಶ್ರೀರಾಮಕೃಷ್ಣ ಪರಮಹಂಸರ ಜೀವನ, ಉಪದೇಶ ಮತ್ತು ಚಿಂತನೆಗಳು ಭಾರತೀಯ ತತ್ವಶಾಸ್ತ್ರ ಸಾರದ ಆಳವನ್ನು ತೋರ್ಪಡಿಸುವುದರ ಜೊತೆಗೆ ಅವರ ಶೈಕ್ಷಣಿಕ ಚಿಂತನೆ, ಆಧ್ಯಾತ್ಮಿಕತೆ, ನೈತಿಕತೆ ಮತ್ತು ಮಾನವೀಯ ಮೌಲ್ಯಗಳನ್ನು ಅನಾವರಣಗೊಳಿಸುತ್ತವೆ. ಈ ದೃಷ್ಟಿಯಿಂದ ಅವರ ಶೈಕ್ಷಣಿಕ ವಿಚಾರಗಳು ಸರ್ವಕಾಲಿಕ ಸತ್ಯಗಳಾಗಿ ಈ ಕೆಳಕಂಡಂತೆ ಕಂಡುಬರುತ್ತವೆ.

- **ಶಿಕ್ಷಣದ ಅರ್ಥ :** ಶ್ರೀ ರಾಮಕೃಷ್ಣ ಪರಮಹಂಸರ ದೃಷ್ಟಿಯಲ್ಲಿ ಶಿಕ್ಷಣವೆಂದರೆ ಕೇವಲ ಪುಸ್ತಕ ಜ್ಞಾನ ಅಥವಾ ಉದ್ಯೋಗ ಪಡೆಯುವ ಸಾಧನವಲ್ಲ. ಬದಲಿಗೆ ಶಿಕ್ಷಣ ಮಾನವನಲ್ಲಿನ ದೈವಿಕತೆಯನ್ನು ಅರಳಿಸುವ ಪ್ರಕ್ರಿಯೆಯಾಗಬೇಕು ಎಂದಿದ್ದಾರೆ.

  ಶಿಕ್ಷಣವು ವ್ಯಕ್ತಿಯ ಆತ್ಮಜ್ಞಾನಕ್ಕೆ ನೆರವಾಗಿ, ಆತನ ಸ್ವಭಾವದ ಶುದ್ಧೀಕರಣಕ್ಕೆ ಪೂರಕವಾಗಬೇಕು ಎಂದಿದ್ದಾರೆ. ದೇವರನ್ನು ಅರಿಯುವ ಜ್ಞಾನವೇ ನಿಜವಾದ ವಿದ್ಯೆ/ ಶಿಕ್ಷಣ ಎಂದಿದ್ದಾರೆ.
- **ಶಿಕ್ಷಣದ ಗುರಿಗಳು :** ಶ್ರೀ ರಾಮಕೃಷ್ಣ ಪರಮಹಂಸರ ಬೋಧನೆಯಲ್ಲಿ ಕಾಣಸಿಗುವ ಶಿಕ್ಷಣದ ಗುರಿಗಳು ಇಂತಿವೆ. ಆತ್ಮಜ್ಞಾನದ ಗುರಿ, ಮಾನವ ಸೇವಾಗುರಿ, ನೈತಿಕ ವಿಕಾಸದ ಗುರಿ, ಚಾರಿತ್ರ್ಯ ನಿರ್ಮಾಣದ ಗುರಿ, ಆಂತರಿಕ ಶಾಂತಿಯ ಗುರಿ.
- **ಆಧ್ಯಾತ್ಮಿಕ ಶಿಕ್ಷಣ :** ಶ್ರೀ ರಾಮಕೃಷ್ಣ ಪರಮಹಂಸರು ಆಧ್ಯಾತ್ಮಿಕ ಶಿಕ್ಷಣಕ್ಕೆ ಒಲವನ್ನು ತೋರಿದ್ದಾರೆ. ಆಧ್ಯಾತ್ಮಿಕ ಶಿಕ್ಷಣವಿಲ್ಲದೆ ಮಾನವನ ಜೀವನ ಅಪೂರ್ಣ ಎಂದಿದ್ದಾರೆ. ಧಾರ್ಮಿಕ ಸಹಿಷ್ಣತೆ ಶಿಕ್ಷಣದ ಅವಶ್ಯಕತೆ ಎಂದಿದ್ದಾರೆ.
- **ನೈತಿಕ ಮತ್ತು ಮೌಲ್ಯಾಧಾರಿತ ಶಿಕ್ಷಣ :** ಶ್ರೀ ರಾಮಕೃಷ್ಣ ಪರಮಹಂಸರ ಪ್ರಕಾರ ಶಿಕ್ಷಣ ನೈತಿಕ ಮತ್ತು ಮೌಲ್ಯಾಧಾರಿತವಾಗಿರಬೇಕು. ಸತ್ಯವಚನ, ಅಹಂಕಾರ ತ್ಯಾಗ, ಇಂದ್ರಿಯ ನಿಯಂತ್ರಣ, ವಿನಯ, ಶ್ರದ್ಧೆ, ಪರೋಪಕಾರದಂತಹ ಸಂಸ್ಕಾರಗಳನ್ನು ಮಕ್ಕಳಿಗೆ ಚಿಕ್ಕಂದಿನಿಂದಲೇ ಕಲಿಸಿಕೊಡಬೇಕು ಎಂದಿದ್ದಾರೆ.
- **ಶಿಕ್ಷಣದ ವಿಧಾನಗಳು:** ಶ್ರೀ ರಾಮಕೃಷ್ಣಪರಮಹಂಸರು ತಮ್ಮ ಬೋಧನೆಯಲ್ಲಿ ಬಳಸಿಕೊಂಡ ಶಿಕ್ಷಣದ ವಿಧಾನಗಳೆಂದರೆ ಉಪಮೆಗಳು ಮತ್ತು ಕಥೆಗಳು, ಸರಳಭಾಷೆ, ದೈನಂದಿನ ಜೀವನದ ಉದಾಹರಣೆಗಳು ಹಾಗೂ ಅನುಭವಾಧಾರಿತ ಬೋಧನೆ.
- **ಗುರು–ಶಿಷ್ಯ ಸಂಬಂಧ :** ಶ್ರೀ ರಾಮಕೃಷ್ಣ ಪರಮಹಂಸರ ದೃಷ್ಟಿಯಲ್ಲಿ ಗುರು ಕೇವಲ ಬೋಧಿಸುವವನಲ್ಲ ಬದಲಿಗೆ ಆಧ್ಯಾತ್ಮಿಕ ಮಾರ್ಗದರ್ಶಕ. ನಿಜವಾದ ಗುರು ತನ್ನ ಶಿಷ್ಯನನ್ನು ಪ್ರೀತಿ, ಸಹನೆಯಿಂದ ಕಾಣಬೇಕು. ಉಪದೇಶಕ್ಕಿಂತ ಶಿಷ್ಯನಿಗೆ ಗುರುವಿನ ಜೀವನವೇ ಉದಾಹರಣೆಯಾಗಬೇಕು.
- **ಮಹಿಳಾ ಶಿಕ್ಷಣ :** ಶ್ರೀ ರಾಮಕೃಷ್ಣ ಪರಮಹಂಸರು ಮಹಿಳೆಯನ್ನು ಶಕ್ತಿಸ್ವರೂಪ ಎಂದು ಗೌರವಿಸಿದ್ದಾರೆ. ಶ್ರೀಮಾತೆ ಶಾರದಾದೇವಿಯವರನ್ನು ಕಾಳಿಯ ಪ್ರತಿರೂಪವೆಂದು ಪೂಜಿಸಿದ್ದಾರೆ.

ಪುಟ 10 ಕ್ಕೆ ➢

ಮಗು, ಸಹನೆ ಇದೆಯಲ್ಲ, ಅದು ದೊಡ್ಡಗುಣ. – ಶ್ರೀಮಾತೆ ಶಾರದಾದೇವಿ

# ಶಿವರಾತ್ರಿಯ ಮಹಿಮೆ



**ನಂ. ನಾಗಲಕ್ಷ್ಮಿ**
ನಿವೃತ್ತ ಕನ್ನಡ ಉಪನ್ಯಾಸಕರು,
ಸರ್ಕಾರಿ ಪ.ಪೂ. ಕಾಲೇಜು,
ಬೆಂಗಳೂರು

ಶಿವರಾತ್ರಿ ಹಬ್ಬ ಎಂದೊಡನೆ ನೆನಪಾಗುವ ಆಚರಣೆಗಳು 'ಉಪವಾಸ' ಮತ್ತು 'ಜಾಗರಣೆ'. ಅಂದು ಉಪವಾಸ ಮಾಡಿ, ಜಾಗರಣೆ ಮಾಡಿದರೆ ಎಲ್ಲ ಪಾಪಗಳೂ ಕಳೆದುಹೋಗಿ ಶಿವಸಾಯುಜ್ಯ ಪ್ರಾಪ್ತಿಯಾಗುವುದು ಖಚಿತವೆಂಬುದು ಎಲ್ಲ ಆಸ್ತಿಕರಲ್ಲಿ ಎಂದಿನಿಂದಲೂ ಮನೆಮಾಡಿರುವ ನಂಬಿಕೆ. ಹಾಗಾಗಿಯೇ ದೇಶದಾದ್ಯಂತ ಎಲ್ಲಾ ಶಿವದೇವಾಲಯಗಳಲ್ಲಿ (ಶಿವಾಲಯವಿಲ್ಲದ ಊರಿಲ್ಲ) ಅಂದು ರಾತ್ರಿಯಿಡೀ ನಾಲ್ಕು ಜಾವಗಳ ಪೂಜೆ, ಶಿವನಾಮ ಸಂಕೀರ್ತನೆಗಳ ಸಂಭ್ರಮವಿರುತ್ತದೆ. ಅಂದರೆ ಎಲ್ಲ ಭಕ್ತಾದಿಗಳು ಅಂದು ನಿದ್ರಿಸದೆ ಶಿವನಾಮ ಜಪವನ್ನು ಮಾಡುವ, ಶಿವನ ಮಹಿಮೆಯನ್ನು ಸಾರುವ ಕಥೆಗಳನ್ನು ಕೇಳುವ ಒಟ್ಟಿನಲ್ಲಿ ಹೇಗಾದರೂ ಸರಿ, ಜಾಗರಣೆ ಮಾಡುವ ಪರಿಪಾಠವಿರುತ್ತದೆ. ಇದನ್ನೇ ಲೋಕರೂಢಿಯ ಮಾತಿನಲ್ಲಿ 'ಜಗಳವಾಡಿಯಾದರೂ ಶಿವರಾತ್ರಿಯಂದು ಜಾವ ಕಳೆ' ಎನ್ನುವ ಮಾತೂ ಬಳಕೆಯಲ್ಲಿದೆ. ಹಾಗೆ ಮಾಡಿದವರನ್ನೂ ಶಿವನು ತನ್ನ ಭಕ್ತರನ್ನಾಗಿಯೇ ಸ್ವೀಕರಿಸುತ್ತಾನೆಂಬ ನಂಬಿಕೆಯಿದೆ. ಹಾಗೆಯೇ ಶಕ್ತ್ಯಾನುಸಾರ ಉಪವಾಸವಿದ್ದು, ಜಾಗರಣೆ ಮಾಡುವವರೂ ಉಂಟು.

ನಮ್ಮ ಹಿಂದೂಧರ್ಮದ ಪ್ರಕಾರ ಸೃಷ್ಟಿ, ಸ್ಥಿತಿ, ಲಯ ಎಂಬ ಈ ಜಗತ್ತಿನ ಸೃಷ್ಟಿ ವ್ಯಾಪಾರದ ಕರ್ತರೆನ್ನುವ ತ್ರಿಮೂರ್ತಿಗಳಾದ ಬ್ರಹ್ಮ, ವಿಷ್ಣು, ಮಹೇಶ್ವರರಲ್ಲಿ ಬಹುತೇಕವಾಗಿ ಆರಾಧಿಸುತ್ತ ಬಂದಿರುವುದು ಸ್ಥಿತಿ ಮತ್ತು ಲಯಕರ್ತರನ್ನು ಮಾತ್ರವೇ. ಬ್ರಹ್ಮನ ದೇವಾಲಯ, ಬ್ರಹ್ಮನನ್ನು ಪೂಜಿಸುವುದು ಅತಿ ವಿರಳವಾಗಿ ಕಾಣುವ, ಕೇಳುವ ವಿಷಯಗಳಾಗಿವೆ. 'ವಾಗರ್ಥಾವಿವ ಸಂಪೃಕ್ತೌ ವಾಗರ್ಥ ಪ್ರತಿಪತ್ತಯೇ। ಜಗತಃ ಪಿತರೌ, ವಂದೇ ಪಾರ್ವತೀ ಪರಮೇಶ್ವರೌ' ಎಂಬ ಸೂಕ್ತಿಯಂತೆ ಜಗತ್ತಿನ ಮಾತಾಪಿತೃಗಳಾದ ಶಿವ, ಪಾರ್ವತಿಯರನ್ನು ಪೂಜಿಸದ ಸ್ಥಳವೇ ನಮ್ಮಲ್ಲಿ ಇಲ್ಲವೆನ್ನಬಹುದು. ಪ್ರಕೃತಿಯಿಲ್ಲದೆ ಪುರುಷನಿಲ್ಲ ವೆಂಬುದನ್ನು ಸಾರುವಂತೆ ಜಗದೀಶ್ವರಿಯನ್ನು ತನ್ನಲ್ಲಿಯೇ ಸೇರಿಸಿ ಕೊಂಡು ಅರ್ಧನಾರೀಶ್ವರನಾಗಿರುವ ಪರಶಿವನು ಯೋಗೀಶ್ವರನೂ ಆಗಿ ಲೋಕವಂದ್ಯನೆನಿಸಿಕೊಂಡವನು. ಲಯಕರ್ತನಾಗಿ ಪ್ರಳಯಕಾಲದ ತಾಂಡವನೃತ್ಯವನ್ನು ಮಾಡುವ ನಟರಾಜನಾಗಿ ಸೃಷ್ಟಿಯ ನಿರಂತರತೆಯನ್ನು ಸಾರಿದರೂ ಈತ ಕರುಣಾಮಯಿ, ಭಕ್ತರ ಕರೆಗೆ ಸದಾ ಓಗೊಡುತ್ತ ಬೇಡಿದ್ದನ್ನೆಲ್ಲಾ ದಯಪಾಲಿಸುವ ಭೋಲೇನಾಥ. 'ಶಿವ' ಎಂದರೆ ಮಂಗಳ ಎಂದೇ ಅರ್ಥ. ಹಿಂದೂಧರ್ಮದ ಪ್ರಕಾರ ಈತ ತ್ರಿಮೂರ್ತಿಗಳಲ್ಲಿ ಸರ್ವೋಚ್ಚನೆನಿಸಿದವನು.

ಇವನಿಗೆ ಆದಿಯೂ ಇಲ್ಲ, ಅಂತ್ಯವೂ ಇಲ್ಲ. ಒಮ್ಮೆ ಬ್ರಹ್ಮ ಮತ್ತು ವಿಷ್ಣು ಇಬ್ಬರಲ್ಲಿ ಯಾರು ಶಕ್ತಿವಂತರೆಂಬ ವಾಗ್ವಾದ ಹುಟ್ಟಿಕೊಂಡಾಗ ಇಬ್ಬರ ನಡುವೆ ಬೆಳಕಿನ ಸ್ತಂಭವೊಂದು ಕಾಣಿಸಿತಂತೆ. ಅದರಲ್ಲಿ ಗೋಚರಿಸಿದ ಶಿವನು ಆ ಸ್ತಂಭದ ಆದಿ ಮತ್ತು ಅಂತ್ಯವನ್ನು ತಲುಪುವವರೇ ಶಕ್ತಿವಂತರೆಂದು ಹೇಳುತ್ತಾನೆ. ಅದರಂತೆ ಹಂಸದ ರೂಪದಲ್ಲಿ ಬ್ರಹ್ಮನು ಆ ಸ್ತಂಭದ ಮೇಲ್ಭಾಗಕ್ಕೆ, ವರಾಹ ರೂಪದಲ್ಲಿ ವಿಷ್ಣುವು ಸ್ತಂಭದ ಕೆಳಭಾಗಕ್ಕೆ ಹೊರಡುತ್ತಾರೆ. ಸಾವಿರಾರು ವರ್ಷಗಳು ಪ್ರಯಾಣಿಸಿದರೂ ಯಾರೂ ಆದಿಯನ್ನಾಗಲೀ, ಅಂತ್ಯವನ್ನಾಗಲೀ ಕಾಣಲಾಗಲಿಲ್ಲ. ಆದರೆ ಬ್ರಹ್ಮನು ಮೇಲಿನಿಂದ ಬೀಳುತ್ತಿದ್ದ ಕೇದಿಗೆ ಹೂವನ್ನು ತನ್ನ ಸಾಕ್ಷಿಯಾಗಿ ಕರೆತಂದು ಶಿವನೊಡನೆ ತಾನು ಮೇಲ್ತುದಿಯನ್ನು ಕಂಡಿದ್ದಕ್ಕೆ ಅದರ ಸಾಕ್ಷ್ಯ ಕೊಡುತ್ತಾನೆ. ವಿಷ್ಣುವು ಮಾತ್ರ ನಿರಾಶನಾಗಿ ಹಿಂತಿರುಗಿ ತನ್ನ ಪರಾಜಯವನ್ನು ಒಪ್ಪಿಕೊಳ್ಳುತ್ತಾನೆ. ಶಿವನು ಸಾಕಾರನಾಗಿ ಗೋಚರಿಸಿ ಅವರಿಬ್ಬರ ಜನ್ಮವು ತನ್ನದೇ ಆದ ಆ ಬೆಳಕಿನ ಸ್ತಂಭದಿಂದಲೇ ಎಂದು ತಿಳಿಸಿ, ಸುಳ್ಳು ಹೇಳಿದ್ದಕ್ಕೆ ಬ್ರಹ್ಮನಿಗೆ ಮತ್ತು ಕೇದಿಗೆ ಪುಷ್ಪಕ್ಕೆ ಪೂಜೆಗೊಳ್ಳುವ ಅರ್ಹತೆಯಿಲ್ಲವೆಂದು ಶಪಿಸಿ, ವಿಷ್ಣುವಿನ ಪ್ರಾಮಾಣಿಕತೆಗೆ ಮೆಚ್ಚಿ, ತನ್ನ ಸರಿಸಮಾನ ಗೌರವವನ್ನು ನೀಡುತ್ತಾನೆ. ಬ್ರಹ್ಮ ಮತ್ತು ವಿಷ್ಣುವಿಗೆ ಜಗತ್ತಿನ ಸೃಷ್ಟಿ ಮತ್ತು ಪಾಲನೆಯ ಕುರಿತು ಜ್ಞಾನವನ್ನೂ ನೀಡುತ್ತಾನೆ.

ಪರಶಿವನು ಭಕ್ತಿ, ಜ್ಞಾನ, ವೈರಾಗ್ಯ ಮೂರೂ ಗುಣಗಳನ್ನು ಪ್ರತಿನಿಧಿಸುತ್ತಾನೆ. 'ನಂಬಿ ಕರೆದರೆ ಓ ಎನ್ನನೇ ಶಿವನು' ಎಂದು ಶಿವಭಕ್ತರು ಹಾಡಿದ್ದಾರೆ. ನಮ್ಮ ಪುರಾಣಗಳಲ್ಲಿ ಪ್ರಸ್ತಾಪಿಸಲಾಗಿರುವ ನೂರಾರು ಕಥೆಗಳಲ್ಲಿ ಶಿವಭಕ್ತರ ಭಕ್ತಿಗೆ ಶಿವ ಒಲಿಯುವುದನ್ನೂ, ಆ ಭಕ್ತರು ಸರ್ವಾರ್ಪಣ ಮನೋಭಾವದಿಂದ ಆರಾಧಿಸಿದಾಗ ಮಾತ್ರವೇ ತನ್ನ ಅನುಗ್ರಹ ಪಡೆಯುವುದು ಸಾಧ್ಯವೆಂದು ನಿರೂಪಿಸಿರುವುದನ್ನೂ ತಿಳಿಯುತ್ತೇವೆ. ಭಕ್ತನು ಎಂತಹವನೇ ಆಗಿದ್ದರೂ, ಅವನ ಆರಾಧನೆಯ ಉದ್ದೇಶವೇನೇ ಇದ್ದರೂ ಅರ್ಪಣಾ ಮನೋಭಾವದ ಭಕ್ತಿಗೆ ಅವನು ಒಲಿಯುವುದರಲ್ಲಿ ಸಂದೇಹವೇ ಇಲ್ಲವೆನ್ನುತ್ತವೆ ನಮ್ಮ ಪುರಾಣಗಳು. ಹಾಗೆಯೇ ಲೋಕ ಕಲ್ಯಾಣವನ್ನು ಬಯಸುತ್ತ ಶಂಕರ,ಪರಮೇಶ್ವರ, ಜಗದೀಶ್ವರ ಮುಂತಾದ ಹಲವಾರು ನಾಮಧೇಯಗಳನ್ನು ಹೊಂದಿರುವ ಶಿವನು ಜ್ಞಾನದ ಮೂಲವೇ ಆಗಿದ್ದಾನೆ. ಅದಕ್ಕೇ ಅವನನ್ನು ಲೋಕಗುರು ಎನ್ನುವುದು. ಇನ್ನು ಗಜ ಚರ್ಮಾಂಬರಧಾರಿಯಾಗಿ, ಭಸ್ಮಲೇಪಿತನಾಗಿ, ಸ್ಮಶಾನ ವಾಸಿಯೆಂಬ ವರ್ಣನೆ ಹೊಂದಿರುವ ಶಿವನು ಯಾವುದೇ ಬಾಹ್ಯ ವೈಭವದ, ಆಲಂಕಾರಿಕ ಅಂಶಗಳನ್ನು ಕುರಿತು ಆಕರ್ಷಣೆ ಹೊಂದದೆ ರಾಗ, ದ್ವೇಷಾದಿಗಳಿಂದ ಮುಕ್ತನಾಗಿ, ವೈರಾಗ್ಯದ ಅಧಿದೇವತೆಯಾದವನೆಂದೇ ಕರೆಸಿಕೊಳ್ಳುತ್ತಾನೆ.

ಆದಿಗುರು, ಲೋಕಗುರು, ಯೋಗೀಶ್ವರ, ಭಕ್ತಪರಾಧೀನ, ನಿರ್ಗುಣ, ನಿರಾಕಾರ, ವ್ಯೋಮಕೇಶ, ನೀಲಕಂಠ, ಅರ್ಧನಾರೀಶ್ವರ ಇನ್ನೂ ಮುಂತಾದ ನೂರಾರು ಹೆಸರುಗಳಿಂದ ಜಗತ್ತನ್ನು ಪಾಲಿಸುವನೆನ್ನುವ ಪರಶಿವನನ್ನು ವಿಶೇಷವಾಗಿ ಆರಾಧಿಸುವ ಪವಿತ್ರದಿನವೇ ಶಿವರಾತ್ರಿ. ಅವನಿಗೆ ಅತಿ ಪ್ರಿಯವೆನ್ನುವ ಬಿಲ್ವಪತ್ರೆಯಿಂದ ಪೂಜಿಸಿದವನು ಸಮಸ್ತ ಪಾಪಗಳಿಂದಲೂ ಮುಕ್ತನಾಗುವನೆಂಬ ನಂಬಿಕೆಯಿದೆ. ಪೌರಾಣಿಕ ಕಥೆಗಳಲ್ಲಿ ಬಿಂಬಿತನಾಗಿರುವ ಪರಶಿವನ ಈ ವಿಶಿಷ್ಟ ಗುಣಗಳನ್ನು ನಂಬಿಕೆಯಿಂದ ಮಾತ್ರವಲ್ಲದೆ ಆ ವ್ಯಕ್ತಿತ್ವವು ಸಾರುವ ಮೌಲ್ಯಗಳ ಸತ್ವವನ್ನು ಅರಿತುಕೊಳ್ಳಬೇಕಾದುದು ಅಗತ್ಯ. ಯಾವುದೇ ಕಾರ್ಯಸಿದ್ಧಿ ಯಾಗಬೇಕಾದರೆ ನಮ್ಮನ್ನು ಸಂಪೂರ್ಣವಾಗಿ ತೊಡಗಿಸಿ ಕೊಳ್ಳಬೇಕೆಂಬುದನ್ನು, ಅರಿವೇ ಗುರು ಎಂಬ ಸತ್ಯವನ್ನು, ಬದುಕಿನಲ್ಲಿ ತಾವರೆ ಎಲೆಯ ಮೇಲಿನ ನೀರಿನಂತೆ ಪ್ರಾಪಂಚಿಕ ವಿಷಯಗಳ ಬಗೆಗೆ ನಮ್ಮ ಮನೋಭಾವವಿರಬೇಕೆಂಬುದನ್ನು ತಿಳಿಸಿಕೊಡುವ ಶಿವನ ಆರಾಧನೆಯ ಜೀವನಮೌಲ್ಯಗಳ ಆರಾಧನೆಯೇ ತಾನೆ? •

ಎಲ್ಲರಿಗೂ ಮಹಾಶಿವರಾತ್ರಿಯ ಶುಭಾಶಯಗಳು.

**ತಾಳ್ಮೆಯಿಂದ ಕಷ್ಟಗಳನ್ನು ಸಹಿಸಿಕೊಳ್ಳಲು ಕಲಿಯಬೇಕು. – ಶ್ರೀಮಾತೆ ಶಾರದಾದೇವಿ**

# ರಾಷ್ಟ್ರೀಯ ವಿಜ್ಞಾನ ದಿನ



**ಶ್ರೀಧರ ಪಾಟೀಲ ಕುಲಕರ್ಣಿ**
ರಾಜ್ಯ ಕಾರ್ಯದರ್ಶಿ
ಕರ್ನಾಟಕ ರಾಜ್ಯ ಮಾಧ್ಯಮಿಕ
ಶಿಕ್ಷಕ ಸಂಘ

ಭಾರತದಲ್ಲಿ ಪ್ರತಿವರ್ಷ ಫೆಬ್ರವರಿ 28ರಂದು ರಾಷ್ಟ್ರೀಯ ವಿಜ್ಞಾನ ದಿನವನ್ನು ಅತ್ಯಂತ ಗೌರವ ಮತ್ತು ಹೆಮ್ಮೆಯಿಂದ ಆಚರಿಸಲಾಗುತ್ತದೆ. ಈ ದಿನವನ್ನು ಆಚರಿಸುವುದಕ್ಕೆ ಪ್ರಮುಖ ಕಾರಣವೆಂದರೆ 1928ರ ಫೆಬ್ರವರಿ 28 ರಂದು ಮಹಾನ್ ಭಾರತೀಯ ವಿಜ್ಞಾನಿ ಸರ್ ಚಂದ್ರಶೇಖರ ವೆಂಕಟ ರಾಮನ್ (Sir C. V. Raman) ಅವರು ಜಗತ್ತಿಗೆ ಅಮೂಲ್ಯವಾದ ರಾಮನ್ ಪರಿಣಾಮ (Raman Effect) ಎಂಬ ವೈಜ್ಞಾನಿಕ ಆವಿಷ್ಕಾರವನ್ನು ಮಾಡಿದರು. ಈ ಆವಿಷ್ಕಾರವು ಭಾರತವನ್ನು ಜಾಗತಿಕ ವಿಜ್ಞಾನ ಭೂಪಟದಲ್ಲಿ ಪ್ರಮುಖ ಸ್ಥಾನಕ್ಕೆ ತಂದು ನಿಲ್ಲಿಸಿತು. ವಿಜ್ಞಾನವನ್ನು ಜನಜೀವನದೊಂದಿಗೆ ಜೋಡಿಸುವುದು, ವೈಜ್ಞಾನಿಕ ಮನೋಭಾವವನ್ನು ಬೆಳೆಸುವುದು ಮತ್ತು ಯುವ ಪೀಳಿಗೆಗೆ ವಿಜ್ಞಾನ ಸಂಶೋಧನೆಯ ಮಹತ್ವವನ್ನು ತಿಳಿಸುವುದು ರಾಷ್ಟ್ರೀಯ ವಿಜ್ಞಾನ ದಿನದ ಮೂಲ ಉದ್ದೇಶವಾಗಿದೆ.

ಭಾರತದ ವಿಜ್ಞಾನ ಇತಿಹಾಸದಲ್ಲಿ ಫೆಬ್ರವರಿ 28 ಒಂದು ಮಹತ್ವದ ದಿನವಾಗಿದೆ. ಬ್ರಿಟಿಷ್ ಆಳ್ವಿಕೆಯ ಕಾಲದಲ್ಲಿಯೇ, ಸೀಮಿತ ಸೌಲಭ್ಯಗಳ ನಡುವೆಯೂ, ಸರ್ ಸಿ.ವಿ.ರಾಮನ್ ಅವರು ಬೆಳಕಿನ ವರ್ತನೆ ಕುರಿತು ಸಂಶೋಧನೆ ನಡೆಸಿ ರಾಮನ್ ಪರಿಣಾಮವನ್ನು ಕಂಡುಹಿಡಿದರು. ಈ ಮಹತ್ವದ ಆವಿಷ್ಕಾರಕ್ಕೆ ಗೌರವವಾಗಿ, 1986ರಲ್ಲಿ ಭಾರತ ಸರ್ಕಾರ ಫೆಬ್ರವರಿ 28ನ್ನು "ರಾಷ್ಟ್ರೀಯ ವಿಜ್ಞಾನ ದಿನ" ಎಂದು ಘೋಷಿಸಿತು. ಅಂದಿನಿಂದ ಈ ದಿನವನ್ನು ದೇಶದಾದ್ಯಂತ ವಿಜ್ಞಾನೋತ್ಸವದಂತೆ ಆಚರಿಸಲಾಗುತ್ತಿದೆ.

## ರಾಷ್ಟ್ರೀಯ ವಿಜ್ಞಾನ ದಿನದ ಉದ್ದೇಶ ಮತ್ತು ಮಹತ್ವ

ವಿಜ್ಞಾನ ದಿನದ ಆಚರಣೆಯ ಹಿಂದೆ ಹಲವಾರು ಮಹತ್ವದ ಉದ್ದೇಶಗಳೆಂದರೆ – ವೈಜ್ಞಾನಿಕ ಜಾಗೃತಿ ಮೂಡಿಸುವುದು ● ವಿಜ್ಞಾನ ಕೇವಲ ಪ್ರಯೋಗಾಲಯಗಳಿಗೆ ಸೀಮಿತವಲ್ಲ, ಅದು ನಮ್ಮ ದೈನಂದಿನ ಜೀವನದ ಅವಿಭಾಜ್ಯ ಅಂಗ ಎಂಬ ಅರಿವು ಮೂಡಿಸುವುದು, ಯುವಜನತೆಯನ್ನು ಪ್ರೇರೇಪಿಸುವುದು ● ವಿದ್ಯಾರ್ಥಿಗಳಲ್ಲಿ ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್ ಮತ್ತು ಗಣಿತ (ಖಿಇಇಬ) ಕ್ಷೇತ್ರಗಳತ್ತ ಆಸಕ್ತಿ ಬೆಳೆಸುವುದು, ವೈಜ್ಞಾನಿಕ ಮನೋಭಾವ ಬೆಳೆಸುವುದು ● ಅಂಧಶ್ರದ್ಧೆಗಳನ್ನು ದೂರ ಮಾಡಿ ತಾರ್ಕಿಕ ಮತ್ತು ವಿಶ್ಲೇಷಣಾತ್ಮಕ ಚಿಂತನೆ ಬೆಳೆಸುವುದು, ವಿಜ್ಞಾನಿಗಳ ಕೊಡುಗೆಗೆ ಗೌರವ ಸಲ್ಲಿಸುವುದು ● ದೇಶದ ಅಭಿವೃದ್ಧಿಗೆ ಶ್ರಮಿಸಿದ ವಿಜ್ಞಾನಿಗಳ ಸಾಧನೆಗಳನ್ನು ಗುರುತಿಸುವುದು.

ರಾಮನ್ ಅವರ ಜೀವನದ ಅತ್ಯಂತ ಮಹತ್ವದ ಸಾಧನೆ ಎಂದರೆ ರಾಮನ್ ಪರಿಣಾಮದ ಆವಿಷ್ಕಾರ. ಈ ಪರಿಣಾಮದ ಪ್ರಕಾರ, ಬೆಳಕು ಒಂದು ಪಾರದರ್ಶಕ ವಸ್ತುವಿನ ಮೂಲಕ ಹಾದುಹೋಗುವಾಗ ಅಥವಾ ಅದರ ಮೇಲೆ ಬೀಳುವಾಗ, ಅದರ ಅಲೆದೈರ್ಘ್ಯದಲ್ಲಿ ಬದಲಾವಣೆ ಉಂಟಾಗುತ್ತದೆ. ಈ ಬದಲಾವಣೆ ಬೆಳಕು ಮತ್ತು ವಸ್ತುವಿನ ಅಣುಗಳ ನಡುವಿನ ಪರಸ್ಪರ ಕ್ರಿಯೆಯಿಂದ ಸಂಭವಿಸುತ್ತದೆ. ಈ ಆವಿಷ್ಕಾರವು ವಿಜ್ಞಾನ ಲೋಕದಲ್ಲಿ ಕ್ರಾಂತಿಕಾರಕ ಬದಲಾವಣೆ ತಂದಿತು. ಬೆಳಕಿನ ಸ್ವಭಾವವನ್ನು ಹೊಸ ದೃಷ್ಟಿಕೋನದಿಂದ ಅರ್ಥಮಾಡಿಕೊಳ್ಳಲು ಇದು ಸಹಾಯ ಮಾಡಿತು. ಇದರ ಆಧಾರದ ಮೇಲೆ ಅಭಿವೃದ್ಧಿಯಾದ ರಾಮನ್ ಸ್ಪೆಕ್ಟ್ರೋಸ್ಕೋಪಿ ಇಂದಿಗೂ ಅನೇಕ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ವ್ಯಾಪಕವಾಗಿ ಬಳಸಲಾಗುತ್ತಿದೆ. ರಾಮನ್ ಪರಿಣಾಮದ ಮಹತ್ವವನ್ನು ಜಗತ್ತು ಗುರುತಿಸಿ, 1930ರಲ್ಲಿ ಸರ್ ಸಿ.ವಿ.ರಾಮನ್ ಅವರಿಗೆ ಭೌತಶಾಸ್ತ್ರ ವಿಭಾಗದ ನೊಬೆಲ್ ಪ್ರಶಸ್ತಿಯನ್ನು ನೀಡಿತು. ಈ ಮೂಲಕ ಅವರು ವಿಜ್ಞಾನ ವಿಭಾಗದಲ್ಲಿ ನೊಬೆಲ್ ಪ್ರಶಸ್ತಿ ಪಡೆದ ಮೊದಲ ಭಾರತೀಯ ಮತ್ತು ಮೊದಲ ಏಷ್ಯನ್ ವಿಜ್ಞಾನಿ ಎಂಬ ಗೌರವಕ್ಕೆ ಪಾತ್ರರಾದರು. ಇದು ಭಾರತಕ್ಕೆ ಮಾತ್ರವಲ್ಲ, ಸಂಪೂರ್ಣ ಏಷ್ಯಾ ಖಂಡಕ್ಕೆ ಹೆಮ್ಮೆಯ ವಿಷಯವಾಗಿತ್ತು. ಸರ್ ಸಿ.ವಿ.ರಾಮನ್ ಅವರು ಕೇವಲ ಸಂಶೋಧಕ ಮಾತ್ರವಲ್ಲ, ಒಬ್ಬ ಶ್ರೇಷ್ಠ ಶಿಕ್ಷಕರೂ ಆಗಿದ್ದರು. ಅವರು ಭಾರತೀಯ ವಿಜ್ಞಾನ ಸಂಸ್ಥೆ (IISc), ಬೆಂಗಳೂರು ಸೇರಿದಂತೆ ಹಲವು ಸಂಶೋಧನಾ ಕೇಂದ್ರಗಳ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡಿದರು. ನಂತರ ಅವರು ಸ್ಥಾಪಿಸಿದ ರಾಮನ್ ಸಂಶೋಧನಾ ಸಂಸ್ಥೆ (Raman Research Institute) ಇಂದು ಕೂಡ ಉನ್ನತ ಮಟ್ಟದ ವಿಜ್ಞಾನ ಸಂಶೋಧನೆಗೆ ಕೇಂದ್ರವಾಗಿದೆ. ರಾಮನ್ ರವರು ವಿದ್ಯಾರ್ಥಿಗಳನ್ನು ಸ್ವತಂತ್ರವಾಗಿ ಯೋಚಿಸಲು, ಪ್ರಶ್ನೆಗಳನ್ನು ಕೇಳಲು ಮತ್ತು ಪ್ರಯೋಗಾತ್ಮಕ ಮನೋಭಾವ ಬೆಳೆಸಲು ಪ್ರೇರೇಪಿಸುತ್ತಿದ್ದರು. "ವಿಜ್ಞಾನವೆಂದರೆ ಕೇವಲ ಪುಸ್ತಕದ ಜ್ಞಾನವಲ್ಲ, ಅದು ಪ್ರಕೃತಿಯನ್ನು ಪ್ರಶ್ನಿಸುವ ಮನೋಭಾವ" ಎಂಬುದು ಅವರ ನಂಬಿಕೆಯಾಗಿತ್ತು.

ಇಂದಿನ ಆಧುನಿಕ ಯುಗದಲ್ಲಿ ರಾಮನ್ ಪರಿಣಾಮದ ಅನ್ವಯತೆ ಅತ್ಯಂತ ವ್ಯಾಪಕವಾಗಿದೆ. ರಾಮನ್ ಪರಿಣಾಮವನ್ನು ವೈದ್ಯಕೀಯ ಕ್ಷೇತ್ರದಲ್ಲಿ ರೋಗನಿರ್ಣಯಕ್ಕೆ, ಔಷಧ ಸಂಶೋಧನೆ ಮತ್ತು ಅಭಿವೃದ್ಧಿಗೆ, ಪರಿಸರ ಮಾಲಿನ್ಯ ವಿಶ್ಲೇಷಣೆಗೆ, ವಸ್ತು ವಿಜ್ಞಾನ ಮತ್ತು ನ್ಯಾನೋ ತಂತ್ರಜ್ಞಾನದಲ್ಲಿ, ಬಾಹ್ಯಾಕಾಶ ಸಂಶೋಧನೆಯಲ್ಲಿ ವ್ಯಾಪಕವಾಗಿ ಬಳಸಲಾಗುತ್ತಿದೆ.

ರಾಷ್ಟ್ರೀಯ ವಿಜ್ಞಾನ ದಿನ ಮತ್ತು ಯುವ ಪೀಳಿಗೆ : ರಾಷ್ಟ್ರೀಯ ವಿಜ್ಞಾನ ದಿನವು ಯುವಜನತೆಗೆ ವಿಶೇಷವಾಗಿ ಮಹತ್ವದ್ದಾಗಿದೆ. ಇದು ವಿದ್ಯಾರ್ಥಿಗಳಲ್ಲಿ ಕುತೂಹಲ, ಸೃಜನಶೀಲತೆ ಮತ್ತು ಸಂಶೋಧನಾ ಮನೋಭಾವವನ್ನು ಬೆಳೆಸುತ್ತದೆ. ವಿಜ್ಞಾನವನ್ನು ಕೇವಲ ಪರೀಕ್ಷೆಯ ವಿಷಯವಲ್ಲದೆ, ಸಮಾಜದ ಸಮಸ್ಯೆಗಳಿಗೆ ಪರಿಹಾರ ನೀಡುವ ಸಾಧನವಾಗಿ ನೋಡುವ ದೃಷ್ಟಿಕೋನವನ್ನು ಈ ದಿನ ಬೆಳೆಸುತ್ತದೆ. ರಾಷ್ಟ್ರೀಯ ವಿಜ್ಞಾನ ದಿನವು ಕೇವಲ ಒಂದು ದಿನದ ಆಚರಣೆ ಅಲ್ಲ;

ಪುಟ 8 ಕ್ಕೆ ➤

ಸಂತೃಪ್ತಿಗೆ ಸಮನಾದ ಸದ್ಗುಣವಿಲ್ಲ. – ಶ್ರೀಮಾತೆ ಶಾರದಾದೇವಿ

# ಛತ್ರಪತಿ ಶಿವಾಜಿ




**ಶ್ರೀಮತಿ ಲಕ್ಷ್ಮೀಸಿಂಗ್ ಬಿ.**
ಶೈಕ್ಷಣಿಕ ಸಮಾಲೋಚಕರು, ಲೈಫ್‌ಕೋಚ್
ಸಂಪನ್ಮೂಲ ವ್ಯಕ್ತಿ (ಗಣಿತ), ಗಂಗಾನಗರ,
ಬೆಂಗಳೂರು –560 032
ದೂರವಾಣಿ ಸಂಖ್ಯೆ: 9980033636


**ಭಾರತದ ಇತಿಹಾಸದಲ್ಲಿ ಮೊಘಲ್ ಸಾಮ್ರಾಜ್ಯದ ವಿಸ್ತರಣೆಯನ್ನು ಮತ್ತು ಬ್ರಿಟೀಷರ ಆಧಿಪತ್ಯವನ್ನು ವಿರೋಧಿಸಿ ಅಪ್ರತಿಮ ಧೈರ್ಯ ಮತ್ತು ತಂತ್ರಜ್ಞಾನದಿಂದ ಹಿಂದೂಸ್ಥಾನವನ್ನು ಒಗ್ಗೂಡಿಸಲು, ಸ್ವರಾಜ್ಯ ಕಲ್ಪನೆಯನ್ನು ಸಾಕಾರಗೊಳಿಸಿ ಸ್ವಾಭಿಮಾನಿ ರಾಷ್ಟ್ರ ನಿರ್ಮಾಣ ಮಾಡಲು ಪಣ ತೊಟ್ಟು ಹೋರಾಡಿದ ಮಹನೀಯರು ಹಲವಾರಿದ್ದಾರೆ. ಅವರುಗಳಲ್ಲಿ ವಿಜಯನಗರ ಸಾಮ್ರಾಜ್ಯದ ಪತನದ ನಂತರ ಮತ್ತೊಮ್ಮೆ ಹಿಂದೂ ಸಾಮ್ರಾಜ್ಯವನ್ನು ಸ್ಥಾಪಿಸಿದ ಹಿಂದುತ್ವ ರಕ್ಷಕ, ಪ್ರಜಾಹಿತ ಸೇನಾನಿ 'ಛತ್ರಪತಿ ಶಿವಾಜಿ' ಮಹಾರಾಜರು ಅಗ್ರಪಂಕ್ತಿಯ ಸ್ಥಾನ ಪಡೆದವರು, ಮರಾಠ ಸಾಮ್ರಾಜ್ಯದ ಸಂಸ್ಥಾಪಕ ಶಿವಾಜಿಯ ಶೌರ್ಯ, ಸಾಹಸ ದೇಶಪ್ರೇಮ ಇಂದಿಗೂ ರಾಷ್ಟ್ರಭಕ್ತ ಆಡಳಿತಗಾರರಿಗೆ ಪ್ರೇರಣಾದಾಯಕ. ಇಂತಹ ಮಹಾನ್ ವೀರನ ಜೀವನ ಚರಿತ್ರೆಯ ಇಣುಕುನೋಟ ಈ ಲೇಖನ ಉದ್ದೇಶ.**

## ಶಿವಾಜಿಯ ಜೀವನ ಮತ್ತು ಬಾಲ್ಯ

ಕ್ರಿ.ಶ.1627, ಫೆಬ್ರವರಿ19 ರಂದು ಅಹ್ಮದ್ ನಗರ, ಸುಲ್ತಾನ್ ಪ್ರಾಂತ್ಯದ ಈಗಿನ ಮಹಾರಾಷ್ಟ್ರ ರಾಜ್ಯದ ಶಿವನೇರುದುರ್ಗದ ಶಿವನೇರಿಯಲ್ಲಿ ವಿಜಾಪುರ ಸುಲ್ತಾನರ ಸೇನಾಪತಿಯಾಗಿದ್ದ ಶಹಾಜಿ ಭೋಂಸ್ಲೆ ಮತ್ತು ಜೀಜಾಬಾಯಿ ಮರಾಠ ಬ್ರಾಹ್ಮಣರ ಸುಪುತ್ರನಾಗಿ ಶಿವಾಜಿರಾಜೆ ಭೋಂಸ್ಲೆ (ಶಿವಾಜಿ)ಯ ಜನನವಾಯಿತು. ತಂದೆ ಶಹಾಜಿ ಧೈರ್ಯಶಾಲಿ ಮರಾಠ ಸರದಾರ, ವಿಜಾಪುರ ಸುಲ್ತಾನರ ದಂಡಯಾತ್ರೆಗಳಲ್ಲಿ ಪ್ರಮುಖನಾಗಿ ಭಾಗವಹಿಸುತ್ತಿದ್ದ ವೀರ. ಕರ್ನಾಟಕದ ಮಾಗಡಿ ಕೆಂಪೇಗೌಡನ ವಿರುದ್ಧ ಹೋರಾಡಿ ಬೆಂಗಳೂರು ಕೋಟೆಯನ್ನು ಸುಲ್ತಾನ್ ಮಹಮ್ಮದ್ ಆದಿಲ್‌ಷಾಹಿಯಿಂದ ಜಹಗೀರು ಪಡೆದು ಆ ಪ್ರಾಂತ್ಯದ ಸರದಾರನಾಗಿದ್ದ. ಬೆಂಗಳೂರಿನ ಕೋಟೆ ಪ್ರದೇಶದಲ್ಲಿ ಕಟ್ಟಿಸಿದ 'ಗೌರಿಮಹಲ್' ಎಂಬ ಬಂಗಲೆಯಲ್ಲಿ ತನ್ನ ಎರಡನೇ ಹೆಂಡತಿ ತುಕಾಬಾಯಿಯೊಡನೆ ಶಹಾಜಿ ಇರತೊಡಗಿದ್ದ. ನಂದಿಬೆಟ್ಟ ಆಗಲೇ ಶಹಾಜಿಯ ಬೇಸಿಗೆ ರಾಜಧಾನಿಯಾಗಿತ್ತು. ಶಿವಾಜಿ ತನ್ನ 12ನೇಯ ವಯಸ್ಸಿನವರೆಗೆ ಬೆಂಗಳೂರಿನಲ್ಲೇ ವಾಸವಿದ್ದು ಅಣ್ಣ ಸಾಂಬಾಜಿಯಿಂದ ಆರಂಭಿಕ ಶಿಕ್ಷಣ ಪಡೆದು ಬಾಲ್ಯವನ್ನು ಇಲ್ಲಿಯೇ ಕಳೆದಿದ್ದನು. ಹೀಗಾಗಿ ಶಿವಾಜಿಯ ಕುಟುಂಬದ ತಾಯಿ ಬೇರು ಕರ್ನಾಟಕ. ನಂತರದಲ್ಲಿ ತನ್ನ ತಾಯಿ ಜೀಜಾಬಾಯಿಯೊಂದಿಗೆ ತನ್ನ ಜನ್ಮಸ್ಥಳವಾದ ಶಿವನೇರಿದುರ್ಗಕ್ಕೆ ವಾಪಾಸ್ಸಾದನು. ತಂದೆಯಿಂದ ದೂರವಾದ ಶಿವಾಜಿಗೆ ತಾಯಿ ಜೀಜಾಬಾಯಿಯೇ ಸಕಲವೂ ಆದಳು. ಅವನ ಭವಿಷ್ಯ ರೂಪಿಸುವಲ್ಲಿ ಜೀಜಾಬಾಯಿಯ ಪಾತ್ರ ಮಹತ್ವದ್ದಾಗಿದೆ.

## ಶಿಕ್ಷಣ ಮತ್ತು ಯುದ್ಧಕಲೆ

ಹಿಂದೂಧರ್ಮ ಮತ್ತು ಸಂಸ್ಕೃತಿಯ ಬಗ್ಗೆ ಅಪಾರ ಅಭಿಮಾನವಿದ್ದ ಜೀಜಾಬಾಯಿ, ರಾಮಾಯಣ, ಮಹಾಭಾರತ, ಪುರಾಣದ ಕಥೆಗಳನ್ನು ಹೇಳಿ ಶಿವಾಜಿಯಲ್ಲಿ ಸ್ವಧರ್ಮದ ಬಗ್ಗೆ ಗೌರವ ಮತ್ತು ಅಭಿಮಾನ ಹೆಚ್ಚಿಸಿದಳು. ಶಿವನೇರಿ ಜಾಗೀರನನ್ನು ನೋಡಿಕೊಳ್ಳುತ್ತಿದ್ದ ದಾದಾಜಿ ಕೊಂಡದೇವನು ರಾಜನೀತಿ, ಯುದ್ಧ ಕೌಶಲ್ಯ, ಆಡಳಿತ ಮುಂತಾದ ಕ್ಷೇತ್ರಗಳಲ್ಲಿ ಮಾರ್ಗದರ್ಶನ ನೀಡಿದರು. ಗುರು ರಾಮದಾಸರು ಹಿಂದೂ ಧರ್ಮಾಭಿಮಾನವನ್ನು, ರಾಷ್ಟ್ರಭಕ್ತಿಯನ್ನು ಅವನಲ್ಲಿ ತುಂಬಿದರು. ಹೀಗೆ ಇವರೆಲ್ಲರ ಆದರ್ಶಗಳನ್ನು ರೂಢಿಸಿಕೊಂಡ ಶಿವಾಜಿ ಶಿಕ್ಷಣ ಮತ್ತು ಯುದ್ಧಕಲೆಯಲ್ಲಿ ಪ್ರವೀಣನಾದನು.

## ಮಹತ್ವಾಂಕಾಕ್ಷಿ ಶಿವಾಜಿ

ಶಿವಾಜಿಯು ತನ್ನ ಶಿಕ್ಷಣವನ್ನು ಪಡೆದುಕೊಂಡ ಮೇಲೆ ವೃತ್ತಿ ಜೀವನ ಆರಂಭಿಸುವ ಮುನ್ನ ತನ್ನ ತಂದೆಯನ್ನು ಕಾಣಲು ಬೆಂಗಳೂರಿಗೆ ಬಂದಿದ್ದನು. ಆ ಸಂದರ್ಭದಲ್ಲಿ ವಿಜಯನಗರ ರಾಜಧಾನಿಯಾಗಿದ್ದ ಹಂಪಿಯನ್ನು ಸಂದರ್ಶಿಸಿ ಹಿಂದೂ ಸಾಮ್ರಾಜ್ಯವನ್ನು ಮತ್ತೊಮ್ಮೆ ಕಟ್ಟಲು ಪ್ರೇರಣೆ ಪಡೆದನು. ಶ್ರೀಶೈಲಕ್ಕೆ ಭೇಟಿ ನೀಡಿ ಮಲ್ಲಿಕಾರ್ಜುನ ದೇವಾಲಯದ ಹೆಬ್ಬಾಗಿಲ ಮೇಲೆ ಗೋಪುರ ಕಟ್ಟಿಸಿದನು. ಧರ್ಮದ ಮೇಲೆ ನಂಬಿಕೆಯಿದ್ದ ಶಿವಾಜಿಗೆ ತುಳಜಾಪುರದ ಭವಾನಿ ಅವನ ಶಕ್ತಿಯಾಗಿದ್ದಳು. ದಾದಾಜಿ ಕೊಂಡದೇವನ ಆಸೆಯಂತೆ ವಿಜಾಪುರ ಆಸ್ಥಾನದಲ್ಲಿ ಸೇವೆ ಸಲ್ಲಿಸಲು ತಿರಸ್ಕರಿಸಿದ ಶಿವಾಜಿ ತಾನು ವಾಸಿಸುತ್ತಿದ್ದ ನೆಲ ಜಲ ಪರಿಸರ ಸಹಧರ್ಮೀಯರ ನೋವುಗಳು, ಪರಕೀಯರ ದಬ್ಬಾಳಿಕೆಗಳು, ತನ್ನ ಧರ್ಮದ ಮೇಲೆ ಆಗುತ್ತಿದ್ದ ಅನ್ಯಾಯಗಳ ವಿರುದ್ಧ ಸಿಡಿದೇಳುವ ಗುರಿಯನ್ನು ತನ್ನದಾಗಿಸಿಕೊಂಡು ಹಿಂದೂ ಧರ್ಮದ ಸ್ಥಾಪನೆಯ ಕನಸನ್ನು ಕಾಣಲಾರಂಭಿಸಿ ಯೋಜನೆಗಳನ್ನು ರೂಪಿಸಲಾರಂಭಿಸಿದ.

ಗುಡ್ಡಗಾಡಿನ ಸಹ್ಯಾದ್ರಿಯ ತಪ್ಪಲಿನಲ್ಲಿ ಚದುರಿದ ಮಾವಳಿಗಳನ್ನು ಒಟ್ಟುಗೂಡಿಸಿ, ಗೇರಿಲ್ಲಾ ಯುದ್ಧಕಲೆಯಲ್ಲಿ ನಿಪುಣರಾಗಿದ್ದ ಇವರನ್ನು ಇನ್ನಷ್ಟು ತರಬೇತಿ ನೀಡಿ, ವ್ಯವಸ್ಥಿತವಾದ ಸೈನ್ಯವನ್ನು ಕಟ್ಟಿದ ಶಿವಾಜಿಗೆ ಇನ್ನೂ 16 ರ ಹರೆಯ. ಹಿಂದೂಗಳನ್ನು ಹಿಂಸಿಸುತ್ತಿದ್ದ ಮುಸ್ಲಿಮ್ ಸರದಾರರನ್ನೂ, ವ್ಯಾಪಾರಸ್ಥರನ್ನೂ ಎದುರಿಸಿ ಲೂಟಿ ಮಾಡಿ ಸಾಮಾನ್ಯ ಜನರಲ್ಲಿ ಹಂಚುತ್ತಿದ್ದ ಶಿವಾಜಿಯ ಕೀರ್ತಿ, ಪ್ರತಿಷ್ಠೆ ಜೊತೆಗೆ ಸೈನ್ಯಬಲ ದಿನದಿಂದ ದಿನಕ್ಕೆ ಹೆಚ್ಚಾಗತೊಡಗಿತು. ತನ್ನ ಯುಕ್ತಿ ಮತ್ತು ಚತುರತೆಯಿಂದ ತನ್ನ ಸುತ್ತಮುತ್ತಲಿನ ಕೋಟೆಗಳನ್ನು ವಶಪಡಿಸಿಕೊಳ್ಳುತ್ತಾ ಬಂದ ಶಿವಾಜಿ, ವಿಜಾಪುರ ಸುಲ್ತಾನನ ಅಧೀನದಲ್ಲಿದ್ದ ತೋರಣದುರ್ಗದ ಮೇಲೂ ದಾಳಿ ಮಾಡಿ ವಶಪಡಿಸಿಕೊಡು ಅಲ್ಲಿ ದೊರೆತ ಅಪಾರ ಸಂಪತ್ತಿನಿಂದ ತನ್ನ ಸೈನ್ಯಬಲವನ್ನು ಇಮ್ಮಡಿಗೊಳಿಸಿ, ರಾಯಗಢ, ಪ್ರತಾಪಗಢ, ಸಿಂಹಗಢ ಮುಂತಾದ ಅನೇಕ ಕೋಟೆಗಳನ್ನು ಗೆದ್ದನು. ಹೀಗೆ ನಿರಂತರವಾಗಿ ಸುಲ್ತಾನನೊಂದಿಗೆ ಯುದ್ಧಗಳನ್ನು ಮಾಡಿ ಒಂದಾದರೊಂದರಂತೆ ಸುಲ್ತಾನನ ವಶದಲ್ಲಿದ್ದ ಕೋಟೆಗಳನ್ನು ಗೆಲ್ಲುತ್ತಾ ಬಂದನು. ಇದರಿಂದ ಕುಪಿತಗೊಂಡ ಆದಿಲ್‌ಷಾಹಿ ಶಿವಾಜಿಯ ತಂದೆ ಶಹಾಜಿಯನ್ನು ಮತ್ತು ಸಹೋದರ ಸಾಂಬಾಜಿಯನ್ನು

**ಪುಟ 7 ಕ್ಕೆ ➢**

➢ ಪುಟ 6 ರಿಂದ.....

ಬಂದಿ ಮಾಡಿದನು. ಮೊಘಲ್ ಬಾದ್‌ಷಹ ಔರಂಗಜೇಬನ ಮಗನಾದ ಮುರಾದ ಭಕ್ಷ್ ವಿಜಾಪುರದ ಮೇಲೆ ದಾಳಿ ಮಾಡಲು ದಕ್ಷಿಣಕ್ಕೆ ಆಗ್ಗೆ ಕಾಲಿಟ್ಟಿದ್ದನು. ಚತುರನಾದ ಶಿವಾಜಿ ಜಾಣ್ಮೆಯಿಂದ ಔರಂಗಜೇಬನ ಮಗನ ಸೈನ್ಯಕ್ಕೆ ಸಹಾಯ ಮಾಡುವೆ ಎಂಬ ಬೆದರಿಕೆ ಹಾಕಿ ಸುಲ್ತಾನನೊಡನೆ ಒಪ್ಪಂದಕ್ಕೆ ಬಂದು ತನ್ನ ತಂದೆ ಮತ್ತು ಸಹೋದರರನ್ನು ಬಂಧಮುಕ್ತಗೊಳಿಸಿದನು.

ಸ್ವಲ್ಪ ದಿನಗಳ ಕಾಲ ಸುಮ್ಮನಿದ್ದ ಶಿವಾಜಿ ಮತ್ತೆ ಯುದ್ಧ ಆರಂಭ ಮಾಡಿ ಮೊಘಲರ ಮತ್ತು ವಿಜಾಪುರ ಸುಲ್ತಾನರ ಕೋಟೆಗಳನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಳ್ಳುತ್ತಾ ಬಂದನು. ಇದರಿಂದ ಕ್ರೋಧಗೊಂಡ ಆದಿಲ್‌ಷಾಹಿ ಅತ್ಯಂತ ಬಲಶಾಲಿಯಾದ ತನ್ನ ಸೇನಾಧಿಪತಿ ಅಫಜಲ್‌ಖಾನನನ್ನು ಯುದ್ಧಕ್ಕೆ ಕಳುಹಿಸಿದನು. ಮೋಸದಿಂದ ಕೊಲ್ಲಲು ತಂತ್ರಮಾಡಿದ ಅಫಜಲ್‌ಖಾನನನ್ನು ಶಿವಾಜಿ ತನ್ನ ಜಾಣತನ ಮತ್ತು ಧೈರ್ಯದಿಂದ 'ವಾಘ್‌ನಖ' ಎಂಬ ಆಯುಧದಿಂದ ಕೊಂದು ಬಿಜಾಪುರದ ಸೈನ್ಯ ದಿಕ್ಕಾಪಾಲಾಗಿ ಓಡಿ ಹೋಗುವಂತೆ ಮಾಡಿದನು. ನಂತರದಲ್ಲಿ ಬಂದ ಸುಲ್ತಾನನ ಯಾವೊಬ್ಬ ಸೇನಾಧಿಪತಿಗೂ ಶಿವಾಜಿಯನ್ನು ಬಂಧಿಸಲು ಆಗಲಿಲ್ಲ. ಕೊನೆಗೆ ದಿಕ್ಕೆಟ್ಟ ವಿಜಾಪುರ ಸುಲ್ತಾನ ಶಿವಾಜಿಯೊಂದಿಗೆ ಒಪ್ಪಂದ ಮಾಡಿಕೊಂಡು ಅವನನ್ನು ಮರಾಠರ ಸ್ವತಂತ್ರ ಅರಸನೆಂದು ಮನ್ನಣೆ ಮಾಡಿ ಗೌರವಿಸಿ ಕಳುಹಿಸಿದ. ಮೊಘಲರೊಂದಿಗೂ ಯುದ್ಧ ಆರಂಭಿಸಿದ್ದ ಶಿವಾಜಿ ಅವರ ಅದೀನದಲ್ಲಿದ್ದ ಕೋಟೆಗಳನ್ನು ಕೂಡ ವಶಪಡಿಸಿಕೊಳ್ಳುತ್ತಾ ಬಂದಿದ್ದ.

1660ರಲ್ಲಿ ಶಿವಾಜಿಯನ್ನು ಹತ್ತಿಕ್ಕಲು ಔರಂಗಜೇಬನು ದಕ್ಷಿಣದ ಸುಬೇದಾರನಾಗಿ ನೇಮಕಗೊಂಡಿದ್ದ ಶಾಹಿಸ್ತಖಾನನನ್ನು ಬಲಿಷ್ಠ ಸೈನ್ಯದೊಂದಿಗೆ ಕಳುಹಿಸಿದನು. ಪುಣೆ, ಕೊಂಕಣ ಕೋಟೆಗಳ ಮೇಲೆ ದಾಳಿ ಮಾಡಿ ಮರಾಠ ಸೈನ್ಯವನ್ನು ಹೊರಹಾಕಿ ಶಾಹಿಸ್ತಾಖಾನನು ಶಿವಾಜಿಯನ್ನು ಕೊಲ್ಲಲು ಪುಣೆಯಲ್ಲಿ ಬಿಡಾರ ಹೂಡಿದನು. ಮೂರು ವರ್ಷಗಳವರೆಗೆ ತಕ್ಕ ಸಮಯಕ್ಕೆ ಕಾಯುತ್ತಿದ್ದ ಶಿವಾಜಿ 1663ರಲ್ಲಿ ಮದುವೆ ದಿಬ್ಬಣದ ವೇಷಧರಿಸಿ ತನ್ನ 400 ಸೈನಿಕರೊಂದಿಗೆ ಶಾಹಿಸ್ತಾಖಾನನ ಬಿಡಾರದ ಮೇಲೆ ದಾಳಿ ಮಾಡಿ ಅವನ ಕೈ ಬೆರಳುಗಳನ್ನು ಕತ್ತರಿಸಿ ಅವನ ಮಗ ಅಬ್ದುಲ್ ಪತಾ, 6 ಜನ ದಳಪತಿಗಳು ಮತ್ತು ಮೊಘಲರ ಸಾವಿರಾರು ಸೈನಿಕರನ್ನು ಕೊಂದು, ದೆಹಲಿಗೆ ವಾಪಸ್ಸು ಓಡಿ ಹೋಗುವಂತೆ ಮಾಡಿದನು. ಆನಂತರ 1664ರಲ್ಲಿ ಸುರತ್ ನಗರವನ್ನು ಲೂಟಿ ಮಾಡಿ, ಮೊಘಲ್ ರಾಜ್ಯಪಾಲನಾದ ಇನಾಯಿತ ಖಾನನನ್ನು ಸೋಲಿಸಿದನು. ಇವೆಲ್ಲ ದಾಳಿಗಳಿಂದ ಅವಮಾನಿತನಾದ ಔರಂಗಜೇಬನು ಶಿವಾಜಿಯನ್ನು 'ಬೆಟ್ಟದ ಇಲಿ' ಎಂದು ಮೂದಲಿಸಿ ಮುತ್ಸದ್ಧಿಯಾದ ರಾಜಾ ಜಯಸಿಂಗನನ್ನು ಶಿವಾಜಿಯನ್ನು ಸದೆ ಬಡಿಯಲು ಕಳುಹಿಸಿದನು. ಆಗ್ರಾಕ್ಕೆ ಬರಲು ಆಮಂತ್ರಣ ಕೊಟ್ಟ ಜಯಸಿಂಗನ ಮಾತಿಗೆ ಕಟ್ಟು ಬಿದ್ದ ಶಿವಾಜಿ ತನ್ನ ಮಗನಾದ ಸಾಂಬಾಜಿಯೊಂದಿಗೆ ಆಗ್ರಾಕ್ಕೆ ಹೊರಟನು. ಅದಕ್ಕೂ ಮುಂಚೆ ಮುಂಜಾಗ್ರತೆಯಿಂದ ತನ್ನ 300 ಸೈನಿಕರನ್ನು ಮಾರುವೇಶದಿಂದ ಆಗ್ರಾಕ್ಕೆ ಕಳುಹಿಸಿದ್ದನು. ಔರಂಗಜೇಬನು ಆಸ್ಥಾನದಲ್ಲಿ ಶಿವಾಜಿಗೆ ಅಪಮಾನಿಸಿ ಸೆರೆಮನೆಗೆ ಹಾಕಿದಾಗ ಶಿವಾಜಿಯ ಸೈನಿಕರು ಉಪಾಯದಿಂದ ಅವರಿಬ್ಬರು ತಪ್ಪಿಸಿಕೊಂಡು ಬರುವಂತೆ ಮಾಡಿದರು. ಆಗ್ರಾದಿಂದ ಪಾರಾಗಿ ಬಂದ ಶಿವಾಜಿ ಮೊಘಲರ ವಿರುದ್ಧ ತಿರುಗಿ ಬಿದ್ದು ಅವರ ವ್ಯಾಪಾರ ಕೇಂದ್ರಗಳನ್ನು ನಾಶ ಮಾಡಿದನು, ಔರಂಗಜೇಬನ ಸೈನ್ಯದ ಮೇಲೆ ಪದೇ ಪದೇ ದಾಳಿಗಳನ್ನು ಮಾಡಿ ಅವನ ಸೈನ್ಯವನ್ನು ಹಿಮ್ಮೆಟ್ಟಿಸಿ ದೆಹಲಿಗೆ ಓಡಿ ಹೋಗುವಂತೆ ಮಾಡಿದನು. ಈ ಎಲ್ಲಾ ವಿಜಯಗಳ ನಂತರ 1674ರಲ್ಲಿ ಮರಾಠ ಸಾಮ್ರಾಜ್ಯವನ್ನು ಕಟ್ಟಿಕೊಂಡ ಶಿವಾಜಿ ರಾಯಗಡದ ಕೋಟೆಯಲ್ಲಿ ಸಿಂಹಾಸನವನ್ನು ಅಲಂಕರಿಸಿ "ಛತ್ರಪತಿ" ಎಂಬ ಬಿರುದನ್ನು ಪಡೆದನು. "ಗೋ ಬ್ರಾಹ್ಮಣ ಪ್ರತಿಪಾಲಕ" ಎಂದು ಶಿವಾಜಿಯನ್ನು ಘೋಷಿಸಲಾಯಿತು

ಕರ್ನಾಟಕ ಸೇರಿದಂತೆ ಹಲವಾರು ಪ್ರದೇಶಗಳನ್ನು ಗೆದ್ದ ಶಿವಾಜಿ ಬ್ರಿಟಿಷರ ವಿರುದ್ಧ ಹೋರಾಡುತ್ತಿದ್ದ ಕೆಳದಿಯ ರಾಣಿ ಚೆನ್ನಮ್ಮಳಿಗೂ ಸಹಾಯ ಹಸ್ತ ನೀಡಿದ್ದ. ಹೀಗೆ ಶಿವಾಜಿ, ಬಿಜಾಪುರ ಸುಲ್ತಾನರ, ದೆಹಲಿಯ ಮೊಘಲರ ಮತ್ತು ಪರಕೀಯರಾದ ಬ್ರಿಟೀಷರ ವಿರುದ್ಧ, ಸ್ವರಾಜ್ಯಕ್ಕಾಗಿ ಹೋರಾಡಿದ ಅಪ್ರತಿಮ ವೀರ.

## ಶಿವಾಜಿಯ ಆಡಳಿತ

ಶಿವಾಜಿಯ ಆಡಳಿತದಲ್ಲಿ ಅಷ್ಟಪ್ರಧಾನರೆಂಬ ಎಂಟು ಜನ ಮಂತ್ರಿಗಳ ಮಂಡಳಿಯಿತ್ತು. ಮುಖ್ಯಮಂತ್ರಿಯನ್ನು ಪೇಶ್ವೆ ಎಂದು ಕರೆಯಲಾಗುತ್ತಿತ್ತು. ಕಟ್ಟುನಿಟ್ಟಿನ ಆಡಳಿತ ಪದ್ಧತಿ ಇತ್ತು. ಭೂಕಂದಾಯವೇ ರಾಜ್ಯದ ಪ್ರಮುಖ ಆದಾಯವಾಗಿತ್ತು. ಉದ್ಯೋಗ ನೇಮಕಾತಿಯಲ್ಲಿ ಮಾನದಂಡಗಳಿದ್ದವು. ಹಣದ ರೂಪದಲ್ಲಿ ವೇತನ ನೀಡಲಾಗುತ್ತಿತ್ತು. ಸ್ತ್ರೀಯರನ್ನು, ಶತ್ರುಗಳನ್ನು ಗೌರವದಿಂದ ಕಾಣಲಾಗುತ್ತಿತ್ತು. ಇಡೀ ಪಶ್ಚಿಮ ಭಾರತ ಏಕೀಕರಣಗೊಂಡಿತ್ತು. ಆಡಳಿತ ಭಾಷೆ ಮರಾಠಿ ಆಗಿತ್ತು. ಶಿವಾಜಿಯು 300 ಕೋಟೆಗಳು, 50,000 ಸೈನಿಕರು ಮತ್ತು ಪಶ್ಚಿಮ ಕರಾವಳಿ ಪ್ರದೇಶದಲ್ಲಿ ಒಂದು ನೌಕಾನೆಲೆಯನ್ನು ಹೊಂದಿದ್ದನು. ಮರಾಠ ಸಾಮ್ರಾಜ್ಯವು ಉಪಖಂಡದ 4.1ರಷ್ಟು ಭಾಗವನ್ನು ಒಳಗೊಂಡಿತ್ತು. ರಾಜಕೀಯ ಸಂಬಂಧಗಳನ್ನು ಗಟ್ಟಿಗೊಳಿಸಲು ಮತ್ತು ತನ್ನ ಸಾಮ್ರಾಜ್ಯ ವಿಸ್ತರಣೆಯನ್ನು ಮಾಡಲು ಶಿವಾಜಿ ಅನೇಕ ವಿವಾಹಗಳನ್ನು ಮಾಡಿಕೊಂಡಿದ್ದನು. ಮೊದಲ ಪತ್ನಿ ಸಾಯಿಭಾಯಿ ನಿಂಬಾಳ್ಕರ್ ಶಿವಾಜಿಯ ಮುಖ್ಯ ರಾಣಿಯಾಗಿದ್ದಳು. ಶಿವಾಜಿಯ ಪ್ರಮುಖ ಪತ್ನಿಯರಲ್ಲಿ ಒಬ್ಬಳಾದ ಸೋಯರಭಾಯಿಯ ಮಗನೇ 'ಸಿಂಹದ ಮರಿ' ಎಂದು ಹೆಸರುವಾಸಿಯಾದ ಸಾಂಭಾಜಿ.

## ಅಂತಿಮನುಡಿ

ಛತ್ರಪತಿ ಶಿವಾಜಿ ಉತ್ತಮ ಆಡಳಿತ ಸುಧಾರಣೆ ನೀತಿಗಳನ್ನು ಜಾರಿಗೊಳಿಸುವ ಮೂಲಕ ಶ್ರೇಷ್ಠ ಆಡಳಿಗಾರನಾಗಿದ್ದ.

ಸ್ವಾಭಿಮಾನಿ ರಾಷ್ಟ್ರ ನಿರ್ಮಾಣಕ್ಕೆ ಹೋರಾಡಿ ಮರಾಠ ಸಾಮ್ರಾಜ್ಯವನ್ನು ಸ್ಥಾಪಿಸಿದ ಶಿವಾಜಿ, ಮಹಾನ್ ದೇಶಭಕ್ತ. ಹಿಂದೂ ಧರ್ಮವನ್ನು ಎತ್ತಿ ಹಿಡಿದವ. ಕ್ರಿ.ಶ 1680 ಏಪ್ರಿಲ್ 3ರಂದು ರಾಯಗಢದಲ್ಲಿ ಶಿವಾಜಿಯ ಮರಣವಾಯಿತು. ಇಂದಿಗೂ ಶಿವಾಜಿಯ ಧೈರ್ಯ, ಸಾಹಸ, ಜಾಣ್ಮೆ, ತಂತ್ರಜ್ಞಾನ ಹೆಸರುವಾಸಿಯಾಗಿವೆ. ಆತನ ಆಡಳಿತ ಕಾರ್ಯ ವೈಖರಿ ಈಗಿನ ದಿನಮಾನಗಳಲ್ಲಿಯೂ ಅಳವಡಿಸಿಕೊಳ್ಳಬಹುದಾಗಿದೆ. ನಮ್ಮ ಯುವ ಜನತೆ ಶಿವಾಜಿಯ ಆದರ್ಶಗಳನ್ನು ಅನುಸರಿಸಿದರೆ ಖಂಡಿತವಾಗಿಯೂ ನಮ್ಮ ಭಾರತ ಸ್ವಾಭಿಮಾನಿ ರಾಷ್ಟ್ರವಾಗುವುದರಲ್ಲಿ ಸಂಶಯವೇ ಇಲ್ಲ.

●

# ಪ್ರಭಾರ ಮುಖ್ಯ ಶಿಕ್ಷಕರ ಭತ್ಯೆ ಪ್ರತಿ ತಿಂಗಳು ಪಾವತಿಸಿ– ಕಲಬುರಗಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಜಿಲ್ಲಾ ಘಟಕ ಡಿಡಿಪಿಐಗೆ ಮನವಿ

ಸರ್ಕಾರಿ ಪ್ರೌಢಶಾಲೆಗಳಲ್ಲಿ ಪ್ರಭಾರ ಮುಖ್ಯಶಿಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರ ಪ್ರಭಾರ ಭತ್ಯೆಯನ್ನು ಪ್ರತಿ ಮಾಸಿಕ ವೇತನಬಿಲ್‌ನೊಂದಿಗೆ ಪಾವತಿಸಬೇಕು ಎಂದು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಜಿಲ್ಲಾ ಘಟಕ ಡಿಡಿಪಿಐಗೆ ಮನವಿ ಸಲ್ಲಿಸಿ ಒತ್ತಾಯಿಸಿತು.

ಜಿಲ್ಲೆಯ ಸರಕಾರಿ ಪ್ರೌಢಶಾಲೆಗಳಲ್ಲಿ ಖಾಲಿ ಇರುವ ಮುಖ್ಯಶಿಕ್ಷಕ ಹುದ್ದೆಗೆ ಅದೇ ಶಾಲೆಯ ಹಿರಿಯ ಅರ್ಹ ಶಿಕ್ಷಕರನ್ನು ಪ್ರಭಾರ ಮುಖ್ಯಶಿಕ್ಷಕರನ್ನಾಗಿ ನೇಮಿಸಲಾಗಿದೆ.

ಪ್ರಭಾರ ಮುಖ್ಯಶಿಕ್ಷಕರು ಹೆಚ್ಚಿನ ಕಾರ್ಯಭಾರದ ಒತ್ತಡದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರಿಗೆ ಪ್ರಭಾರ ಭತ್ಯೆಯನ್ನು ಮಂಜೂರು ಮಾಡಲು ಹಾಲಿ ಅನುಸರಿಸುತ್ತಿರುವ ಕಾರ್ಯವಿಧಾನದ ಜಟಿಲತೆಯಿಂದಾಗಿ ಹಲವಾರು ಸಂದರ್ಭಗಳಲ್ಲಿ ಪ್ರಭಾರ ಭತ್ಯೆ ಪಡೆಯುವುದು ಬಹಳ ಕಷ್ಟಕರವಾಗಿದೆ. ಈಗಾಗಲೇ ಪದವಿಪೂರ್ವ ಶಿಕ್ಷಣ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರಭಾರ ಪ್ರಾಚಾರ್ಯರಿಗೆ ಸರಕಾರಿ ಆದೇಶದನ್ವಯ ಮಂಜೂರು ಮಾಡಲಾಗುತ್ತಿದೆ.

ಆದ್ದರಿಂದ ಸರಕಾರಿ ಪ್ರೌಢಶಾಲೆಗಳಲ್ಲಿ ಪ್ರಭಾರ ಮುಖ್ಯಶಿಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರ ಪ್ರಭಾರ ಭತ್ಯೆಯನ್ನು ಪ್ರತಿ ಮಾಸಿಕ ವೇತನ ಬಿಲ್‌ನೊಂದಿಗೆ ಪಾವತಿಸಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ಜಿಲ್ಲಾಧ್ಯಕ್ಷ ಸಂಜುಕುಮಾರ ಪಾಟೀಲ್, ರಾಜ್ಯ ಕಾರ್ಯದರ್ಶಿ ಮಹೇಶ ಬಸರಕೋಡ, ವಿಭಾಗ ಪ್ರಮುಖ ಚಂದ್ರಶೇಖರ ಪಾಟೀಲ್, ಖಜಾಂಚಿ ದೇವೇಂದ್ರ ಕನ್ನೊಳ್ಳಿ, ರುದ್ರಪ್ಪ ಚಟ್ನಳ್ಳಿ, ಬಾಬರ, ಗುರುಶಾಂತ ಚಿಂಚೋಳಿ ಇದ್ದರು.



# ಅಭಿನಂದನೆಗಳು

ನಮ್ಮ ಸಂಘದ ಹಿರಿಯ ಕಾರ್ಯಕರ್ತರಾದ ಶ್ರೀ ಲಕ್ಷ್ಮಣ ರಾವ್ ರವರ ಮಗ ಶ್ರೀ ಗಿರೀಶ್ ಮತ್ತು ಮಂಜುಳ ಇವರ ಮಗ MBBS ನಲ್ಲಿ ಉತ್ತಮ ಅಂಕಗಳಿಸಿ ಉತ್ತೀರ್ಣರಾಗಿದ್ದು, ಪ್ರಸ್ತುತ M S (Master's of Surgery) ಗೆ ESIC ನಲ್ಲಿ ಉಚಿತವಾಗಿ ಓದುವುದಕ್ಕೆ ಅವಕಾಶ ಗಳಿಸಿದ ಆದಿತ್ಯ ಜಿ ಹಳ್ಳಿಮಾಳ ಇವರಿಗೆ ಅಭಿನಂದನೆಗಳು. ಈ ವಿದ್ಯಾರ್ಥಿಯು ಬೆಂಗಳೂರು ಉತ್ತರ ಜಿಲ್ಲೆಯ ಪ್ರತಿಭಾ ಪುರಸ್ಕಾರದಲ್ಲಿ ಪುರಸ್ಕೃತರಾಗಿದ್ದರು.

ಹಾಗೆಯೇ ಶ್ರೀ ಲಕ್ಷ್ಮಣರಾವ್‌ರವರ ಮಗಳು ಶ್ರೀಮತಿ ಅರುಣ ಮತ್ತು ರವಿಪ್ರಕಾಶ್ ಇವರ ಮಗ ಕಾರ್ತಿಕೇಯ ಇವರು California of University , Sandiyogo ಯಲ್ಲಿ M S (Eng) ಮಾಡುತ್ತಿದ್ದಾರೆ ಇವರಿಗೆ ಅಭಿನಂದನೆಗಳು.

# ಶಹಾಪುರದ ಚಾಮನಾಳದಲ್ಲಿ ಕರ್ತವ್ಯಬೋಧ ದಿವಸ್

ಯಾದಗಿರಿ ಜಿಲ್ಲೆಯ, ಶಹಾಪುರ ತಾಲ್ಲೂಕಿನ ಚಾಮನಾಳದ ಸರ್ಕಾರಿ ಪಿಯು ಕಾಲೇಜಿನಲ್ಲಿ ಕರ್ತವ್ಯ ಬೋಧ ದಿವಸ್ ಕಾರ್ಯಕ್ರಮವು ದಿನಾಂಕ 22.01.2026 ಗುರುವಾರದಂದು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಶಿಕ್ಷಕರು ಮತ್ತು ಉಪನ್ಯಾಸಕರು ಹಾಗೂ ಸುಮಾರು 100 ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಎಬಿಆರ್‌ಎಸ್‌ಎಂನ ಶಾಲಾ ಶಿಕ್ಷಣದ ಅಖಿಲ ಭಾರತ ಪ್ರಮುಖ್ ಶ್ರೀ ಶಿವಾನಂದ ಸಿಂಧನಕೇರ ಅವರು ಸಭೆಯನ್ನುದ್ದೇಶಿಸಿ ಮಾತನಾಡಿದರು, ಹಿರಿಯ ಉಪನ್ಯಾಸಕ ಶ್ರೀ ಗುರುನಾಥ ದೇಸಾಯಿ ಅವರು ಸಂಕಲ್ಪ ಬೋಧಿಸಿದರು.

➢ ಪುಟ 5 ರಿಂದ.....

ಅದು ವೈಜ್ಞಾನಿಕ ಚಿಂತನೆಗೆ ಸಮರ್ಪಿತವಾದ ಸಂಭ್ರಮವಾಗಿದೆ. ಸರ್ ಸಿ.ವಿ.ರಾಮನ್ ಅವರ ಜೀವನ ಮತ್ತು ಸಾಧನೆಗಳು ನಮಗೆ ದೃಢಸಂಕಲ್ಪ, ಪರಿಶ್ರಮ ಮತ್ತು ಸ್ವತಂತ್ರ ಚಿಂತನೆಯ ಮಹತ್ವವನ್ನು ಕಲಿಸುತ್ತವೆ. ವಿಜ್ಞಾನವು ರಾಷ್ಟ್ರದ ಪ್ರಗತಿಗೆ ಬೆನ್ನೆಲುಬು ಎಂಬುದನ್ನು ಈ ದಿನ ನಮಗೆ ನೆನಪಿಸುತ್ತದೆ. ನಾವು ಎಲ್ಲರೂ ವಿಜ್ಞಾನವನ್ನು ಗೌರವಿಸಿ, ವೈಜ್ಞಾನಿಕ ಮನೋಭಾವವನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ, ಭಾರತವು ಭವಿಷ್ಯದಲ್ಲಿ ಇನ್ನೂ ಶಕ್ತಿಶಾಲಿ ಮತ್ತು ಅಭಿವೃದ್ಧಿಶೀಲ ರಾಷ್ಟ್ರವಾಗುತ್ತದೆ.

ಸರ್ ಸಿ.ವಿ.ರಾಮನ್ ಅವರ ಆದರ್ಶಗಳು ಮತ್ತು ರಾಷ್ಟ್ರೀಯ ವಿಜ್ಞಾನ ದಿನದ ಸಂದೇಶವು ಪ್ರತಿಯೊಬ್ಬ ಭಾರತೀಯನಿಗೂ ಶಾಶ್ವತ ಪ್ರೇರಣೆಯಾಗಲಿ. ●

# ಕೇಂದ್ರ ಶಿಕ್ಷಣ ಸಚಿವರನ್ನು ಭೇಟಿ ಮಾಡಿದ ABRSM ನಿಯೋಗ

ಸುಪ್ರೀಂ ಕೋರ್ಟ್‌ನ TET ತೀರ್ಪಿನ ಕುರಿತು ABRSM ನಿಯೋಗವು ಕೇಂದ್ರ ಶಿಕ್ಷಣ ಸಚಿವರನ್ನು ಭೇಟಿ ಮಾಡಿ ಸೂಕ್ತ ಕ್ರಮ ಕೈಗೊಳ್ಳುವಂತೆ ಕೋರಿದೆ.

ಮಾಧ್ಯಮಿಕ ಶಿಕ್ಷಕ ಸಂಘ ದ ಮಾತೃಸಂಸ್ಥೆ ಯಾದ ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಣಿಕ ಮಹಾಸಂಘ (ABRSM) ನಿಯೋಗವು ಇಂದು ಭಾರತ ಸರ್ಕಾರದ ಶಿಕ್ಷಣ ಸಚಿವಾಲಯದಲ್ಲಿ ಕೇಂದ್ರ ಶಿಕ್ಷಣ ಸಚಿವ ಶ್ರೀ ಧರ್ಮೇಂದ್ರ ಪ್ರಧಾನ್ ಅವರನ್ನು ಭೇಟಿ ಮಾಡಿ, ಶಿಕ್ಷಕರ ಅರ್ಹತಾ ಪರೀಕ್ಷೆ (TET) ಕುರಿತು ಸಿವಿಲ್ ಮೇಲ್ಮನವಿ ಸಂಖ್ಯೆ 1385/2015 ರಲ್ಲಿ ಗೌರವಾನ್ವಿತ ಸುಪ್ರೀಂ ಕೋರ್ಟ್‌ನ 01.09.2025 ರಂದು ನೀಡಿದ ತೀರ್ಪಿನ ಕುರಿತು ವಿವರವಾದ ಜ್ಞಾಪಕ ಪತ್ರವನ್ನು ಸಲ್ಲಿಸಿತು.

ಎಲ್ಲಾ ಸೇವಾವಧಿಯಲ್ಲಿರುವ ಶಿಕ್ಷಕರಿಗೆ ಅವರ ನೇಮಕಾತಿ ದಿನಾಂಕವನ್ನು ಲೆಕ್ಕಿಸದೆ TET ಕಡ್ಡಾಯಗೊಳಿಸುವ ಬಗ್ಗೆ ನಿಯೋಗವು ಗಂಭೀರ ಕಳವಳ ವ್ಯಕ್ತಪಡಿಸಿದ್ದು, ಈ ತೀರ್ಪನ್ನು ಪೂರ್ವಾನ್ವಯವಾಗಿ ಅನ್ವಯಿಸಿದರೆ ದೇಶಾದ್ಯಂತ ಸುಮಾರು 1.2 ಮಿಲಿಯನ್ ಶಿಕ್ಷಕರ ಸೇವಾ ಭದ್ರತೆ, ಹಿರಿತನ, ಬಡ್ತಿಗಳು ಮತ್ತು ಜೀವನೋಪಾಯದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ.

ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಮಂಡಳಿ (NCTE) ಅಧಿಸೂಚನೆಯು ದಿನಾಂಕ 23.08.2010 ರಿಂದ ಜಾರಿಗೆ ಬರುತ್ತದೆ ಮತ್ತು ಈ ದಿನಾಂಕಕ್ಕಿಂತ ಮೊದಲು ನೇಮಕಗೊಂಡ ಶಿಕ್ಷಕರು TET ಯಿಂದ ವಿನಾಯಿತಿ ಪಡೆದಿದ್ದಾರೆ ಎಂದು ಸ್ಪಷ್ಟವಾಗಿ ಹೇಳುತ್ತದೆ ಎಂಬ ಅಂಶದ ಬಗ್ಗೆ ನಿಯೋಗವು ಕೇಂದ್ರ ಶಿಕ್ಷಣ ಸಚಿವರ ಗಮನ ಸೆಳೆಯಿತು. ಆ ಅವಧಿಯಲ್ಲಿ ಚಾಲ್ತಿಯಲ್ಲಿರುವ ಶೈಕ್ಷಣಿಕ ಮತ್ತು ವೃತ್ತಿಪರ ಅರ್ಹತೆಗಳ ಅನುಸಾರ ನೇಮಕಗೊಂಡ ಅನುಭವಿ ಶಿಕ್ಷಕರಿಗೆ ತೀರ್ಪನ್ನು ಪೂರ್ವಾನ್ವಯವಾಗಿ ಅನ್ವಯಿಸುವುದು ಸರಿಯಲ್ಲ.

ಅಧಿಸೂಚನೆಗೆ ಮೊದಲು ನೇಮಕಗೊಂಡ ಶಿಕ್ಷಕರ ಹಿರಿತನ, ಘನತೆ ಮತ್ತು ಕಾನೂನುಬದ್ಧ ನಿರೀಕ್ಷೆಗಳನ್ನು ರಕ್ಷಿಸಲು ಮತ್ತು ಸೇವೆಗಳ ಮುಕ್ತಾಯ ಮತ್ತು ಬಡ್ತಿ ನಿರಾಕರಣೆಯನ್ನು ತಡೆಯಲು ಅಗತ್ಯವಾದ ಕಾನೂನು ಮತ್ತು ಆಡಳಿತಾತ್ಮಕ ಕ್ರಮ ಕೈಗೊಳ್ಳುವಂತೆ ಮಹಾಸಂಘವು ಕೇಂದ್ರ ಶಿಕ್ಷಣ ಸಚಿವರನ್ನು ವಿನಂತಿಸಿತು.

ಇದೇ ಸಂದರ್ಭದಲ್ಲಿ, ನಿಯೋಗವು ವಿಕಸಿತ ಭಾರತ ಶಿಕ್ಷಾ ಅಧಿಷ್ಠಾನ ಮಸೂದೆಯನ್ನು ಸ್ವಾಗತಿಸಿತು ಮತ್ತು ಅದರ ಉದ್ದೇಶಗಳನ್ನು ಶ್ಲಾಘಿಸುವದರ ಜೊತೆಗೆ ಮಸೂದೆಯನ್ನು ಹೆಚ್ಚು ಪರಿಣಾಮಕಾರಿ, ಸಮಗ್ರ ಮತ್ತು ಪ್ರಾಯೋಗಿಕವಾಗಿಸಲು ಸುಧಾರಣೆಗಾಗಿ ಕೆಲವು ಪ್ರಮುಖ ಸಲಹೆಗಳನ್ನು ನೀಡಿತು. ಇದಲ್ಲದೆ, ಉನ್ನತ ಶಿಕ್ಷಣ ಮತ್ತು ಶಾಲಾ ಶಿಕ್ಷಣಕ್ಕೆ ಸಂಬಂಧಿಸಿದ ವಿವಿಧ ದೀರ್ಘಕಾಲದಿಂದ ಬಾಕಿ ಉಳಿದಿರುವ ಸಮಸ್ಯೆಗಳನ್ನು ಎತ್ತಿ ತೋರಿಸುವ ವಿವರವಾದ ಜ್ಞಾಪಕ ಪತ್ರವನ್ನು ಗೌರವಾನ್ವಿತ ಸಚಿವರಿಗೆ ಸಲ್ಲಿಸಲಾಯಿತು.

ಟಿಇಟಿಗೆ ಸಂಬಂಧಿಸಿದಂತೆ ಸಂಸ್ಥೆಯು ಮಂಡಿಸಿದ ದಾಖಲೆಗಳು ಮತ್ತು ಸಂಗತಿಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿ ಅರ್ಥಮಾಡಿಕೊಂಡ ನಂತರ, ಕೇಂದ್ರ ಶಿಕ್ಷಣ ಸಚಿವರು ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಮಂಡಳಿಯ (ಎನ್‌ಸಿಟಿಇ) ಅಧ್ಯಕ್ಷರು ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೆ ಈ ವಿಷಯದಲ್ಲಿ ಸೂಕ್ತ ಮತ್ತು ಅಗತ್ಯ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿದರು. ಶಿಕ್ಷಣದಲ್ಲಿ ಗುಣಮಟ್ಟವನ್ನು ಖಚಿತಪಡಿಸಿಕೊಳ್ಳುವ ಮತ್ತು ಶಿಕ್ಷಕರು ಮತ್ತು ಶಿಕ್ಷಣ ಸಂಸ್ಥೆಗಳ ಹಿತಾಸಕ್ತಿಗಳನ್ನು ಕಾಪಾಡುವ ಮೂಲಕ ಎತ್ತಲಾದ ಸಮಸ್ಯೆಗಳನ್ನು ಸಮತೋಲಿತ ಮತ್ತು ಸಕಾರಾತ್ಮಕ ವಿಧಾನದಿಂದ ಪರಿಶೀಲಿಸಲಾಗುವುದು ಎಂದು ಅವರು ಭರವಸೆ ನೀಡಿದರು.

ಎಬಿಆರ್‌ಎಸ್‌ಎಂ ನಿಯೋಗದಲ್ಲಿ ಅಧ್ಯಕ್ಷ ಪ್ರೊ. ನಾರಾಯಣ್ ಲಾಲ್ ಗುಪ್ತಾ, ಪ್ರಧಾನ ಕಾರ್ಯದರ್ಶಿ ಪ್ರೊ. ಗೀತಾ ಭಟ್, ಸಂಘಟನಾ ಕಾರ್ಯದರ್ಶಿ ಮಹೇಂದ್ರ ಕಪೂರ್, ಜಂಟಿ ಸಂಘಟನಾ ಕಾರ್ಯದರ್ಶಿ ಜಿ. ಲಕ್ಷ್ಮಣ್, ಹಿರಿಯ ಉಪಾಧ್ಯಕ್ಷ ಮಹೇಂದ್ರ ಕುಮಾರ್, ಶಾಲಾ ಶಿಕ್ಷಣದ ಉಸ್ತುವಾರಿ ಶಿವಾನಂದ ಸಿಂಧನಕೇರಾ, ಎನ್‌ಐಟಿ ಶಿಕ್ಷಕರ ವೇದಿಕೆಯ ಸಂಚಾಲಕ ಪ್ರೊ. ಮಹೇಂದ್ರ ಶ್ರೀಮಾಲಿ, ಎಬಿಆರ್‌ಎಸ್‌ಎಂ ತೆಲಂಗಾಣ ಘಟಕ (ಟಿಪಿಯುಎಸ್) ಅಧ್ಯಕ್ಷ ಹನುಮಂತ್ ರಾವ್, ಮತ್ತು ಮಹಾಸಂಘದ ತಮಿಳುನಾಡು ಘಟಕದ ದೇಶೀಯ ಆಶ್ರಯ ಸಂಗಮ್‌ನ ಪ್ರಧಾನ ಕಾರ್ಯದರ್ಶಿ ಕಂದಸಾಮಿ ಇದ್ದರು.

**– ಸಂದೀಪ ಬೂದಿಹಾಳ**
ಅಧ್ಯಕ್ಷರು, ಕರ್ನಾಟಕ ಮಾಧ್ಯಮಿಕ ಶಿಕ್ಷಕ ಸಂಘ

- **ಶಾಶ್ವತವಾದ ತುಷ್ಟೀಕರಣದ ನೀತಿಗಿಂತ ಮೂರ್ಖತೆ ಇನ್ನೊಂದಿಲ್ಲ, ಮಿತಿಯಿಲ್ಲದ ಬೇಡಿಕೆಗಳು ಹಾಗೂ ಎಂದೂ ತೃಪ್ತಿಪಡಿಸಲಾಗದ ತುಷ್ಟೀಕರಣ – ಇದೇ ಈ ನೀತಿಯ ಅಂತಿಮ ಗುರಿ.**
- ಹಿಂಸಾಚಾರಕ್ಕೆ ಶರಣಾಗಿ ಗಳಿಸಿದ ಶಾಂತಿ ನಿಜಕ್ಕೂ ಶಾಂತಿ ಎನಿಸದು. ಅದು ಆತ್ಮಘಾತುಕತನ ಮಾತ್ರವಲ್ಲ, ಗೌರವ ಸಂಪನ್ನ ಮಾನವೀಯ ಬದುಕಿಗೆ ಅಗತ್ಯವೆನಿಸುವ ಎಲ್ಲ ಉದಾತ್ತ ಸಂಗತಿಗಳನ್ನು ಬರ್ಬರತೆಯ ಹಾಗೂ ಮೃಗೀಯ ಶಕ್ತಿಗಳ ಮುಂದೆ ಬಲಿಕೊಡುವಂತಹ ಕೃತ್ಯ ಅದು. **– ಡಾ. ಬಿ. ಆರ್. ಅಂಬೇಡ್ಕರ್**

➢ ಪುಟ 3 ರಿಂದ.....

ಮಹಿಳೆಯ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣಕ್ಕೆ ಪ್ರಾಮುಖ್ಯತೆ ನೀಡಬೇಕೆಂದಿದ್ದಾರೆ. ಮಹಿಳೆಯನ್ನು ಭೋಗದ ವಸ್ತುವಾಗಿ ನೋಡುವ ದೃಷ್ಟಿಕೋನವನ್ನು ತೀವ್ರವಾಗಿ ಖಂಡಿಸಿದ್ದಾರೆ.

ಶ್ರೀ ರಾಮಕೃಷ್ಣರ ಚಿಂತನೆಗಳು ಸಮಕಾಲೀನ ಶಿಕ್ಷಣವನ್ನು ವಿಭಿನ್ನ ಆಯಾಮದಲ್ಲಿ ಪ್ರಭಾವಿಸಿದೆ. ಮೌಲ್ಯಾಧಾರಿತ ಶಿಕ್ಷಣ, ಆಧ್ಯಾತ್ಮಿಕತೆ ಮತ್ತು ವಿಜ್ಞಾನದ ನಡುವಿನ ಸಮತೋಲನ ಇಂದಿಗೂ ಶಿಕ್ಷಣ ಕ್ಷೇತ್ರದ ಬಹು ಆದ್ಯತೆಯ ಸಂಗತಿಗಳಾಗಿವೆ.

ಶಿಕ್ಷಣ ಮಾನವನನ್ನು ಪೂರ್ಣ ವಿಕಸಿಸುವಂತೆ ಮಾಡಬೇಕು ಎಂದಿದ್ದಾರೆ. ಶ್ರೀ ರಾಮಕೃಷ್ಣ ಪರಮಹಂಸರ ಶೈಕ್ಷಣಿಕ ಚಿಂತನೆಗಳನ್ನು ಪ್ರತಿಪಾದಿಸಿ ಜಾಗತಿಕ ವೇದಿಕೆಯಲ್ಲಿ ಮಾನ್ಯತೆ ದೊರೆಯುವಂತೆ ಮಾಡಿದ ಶ್ರೇಯಸ್ಸು ಅವರ ಶಿಷ್ಯರಾದ ಸ್ವಾಮಿ ವಿವೇಕಾನಂದರಿಗೆ ಸಲ್ಲುತ್ತದೆ.

"ಜೈ ಶ್ರೀ ರಾಮಕೃಷ್ಣ"

# ಕ್ರಾಂತಿವೀರ ಆಜಾದರ ಒಂದಾಣಿ

ಕ್ರಾಂತಿಕಾರಿ ಚಂದ್ರಶೇಖರ ಆಜಾದರು ಸ್ವಲ್ಪ ಸಮಯ ಬುಂದೇಲಖಂಡದ ಒಂದು ಕಂಪೆನಿಯಲ್ಲಿ ದುಡಿಯುತ್ತಿದ್ದರು. ಸರಿಯಾಗಿ ಊಟ ಮಾಡಲೂ ಹಣ ಸಾಲುತ್ತಿರಲಿಲ್ಲ. ಕೆಲವೊಮ್ಮೆ ಕಡಲೆಕಾಳು ತಿಂದು ಹಸಿವೆ ನೀಗಿಸಬೇಕಾಗುತ್ತಿತ್ತು.

ಒಂದು ದಿನ ಚಂದ್ರಶೇಖರ ಆಜಾದರ ಬಳಿ ಕೇವಲ ಒಂದಾಣೆ ಮಾತ್ರ ಉಳಿದಿತ್ತು. ಅಂದು ದಿನವಿಡೀ ಏನೂ ತಿನ್ನಲಿಲ್ಲ. ಹಸಿದ ಹೊಟ್ಟೆಯಲ್ಲೇ ವಾಹನ ಚಲಾಯಿಸಿದರು. ಸಂಜೆಯಾಗುವ ಹೊತ್ತಿಗೆ ಹಸಿವೆ ತಡೆಯಲಾರದೆ ಕಂಗಾಲಾದರು. ದೂರದಲ್ಲಿ ಕಡಲೆ ಮಾರುವವ ಕಂಡ. ಒಂದಾಣೆಗೆ ಹುರಿದ ಕಡಲೆ ಕೊಂಡುಕೊಂಡರು. ಕಡಲೆಕಾಳು ತಿನ್ನುತ್ತಾ ಹೋಗುತ್ತಿದ್ದರು.

ಸ್ವಲ್ಪದರಲ್ಲೇ ಆ ಕಡಲೆಕಾಳುಗಳ ಮಧ್ಯೆ ಒಂದಾಣೆಯ ಒಂದು ನಾಣ್ಯ ಕೈಗೆ ತಾಗಿತು; ಅಚ್ಚರಿಯಾಯಿತು. ನಾಳೆಗೆ ಈ ಒಂದಾಣೆಯಿಂದ ಸುಧಾರಿಸಬಹುದು. ನಾಡಿದ್ದು ಮತ್ತೇನಾದರೂ ಮಾಡಿದರಾಯಿತು ಎಂದುಕೊಂಡರು. ಆದರೆ ಮನಸ್ಸು ಕೇಳಲಿಲ್ಲ– ' ಈ ಒಂದಾಣೆ ನನ್ನದಲ್ಲವಲ್ಲ, ಇದು ನಾನು ಶ್ರಮಪಟ್ಟು ಸಂಪಾದಿಸಿದ್ದಲ್ಲ. ಆ ಕಡಲೆ ಮಾರುವವ ಗಡಿಬಿಡಿಯಲ್ಲಿ ಹೀಗೆ ಮಾಡಿದ್ದಾನೆ' ಎಂದು ಕೊಂಡು ಅವನಲ್ಲಿಗೆ ವಾಪಸ್ಸು ಹೋದರು. 'ಏನಣ್ಣಾ, ನೀನು ಒಂದಾಣೆಯ ಕಡಲೆಯನ್ನು ಕೊಟ್ಟು, ಅದರಲ್ಲಿ ಒಂದಾಣೆಯ ನಾಣ್ಯವನ್ನೂ ಹಾಕಿದ್ದೀಯಲ್ಲ. ಹೀಗೆ ಮಾಡಿದರೆ ನಿನಗೆ ನಷ್ಟವಾಗುವುದಿಲ್ಲವೇ?' ಎನ್ನುತ್ತಾ ಆ ಒಂದಾಣೆಯನ್ನು ಆತನ ಕೈಯಲ್ಲಿಟ್ಟು ಹೊರಟರು. ಕಡಲೆ ಮಾರುವವನು 'ಇಂಥವರೂ ಇದ್ದಾರೆಯೇ?' ಎಂದುಕೊಂಡು ದಂಗಾದ.

ಬಡತನದಲ್ಲಿದ್ದರೂ ಆಜ಼ಾದರು ಪ್ರಾಮಾಣಿಕತೆಯನ್ನು ಬಿಡಲಿಲ್ಲ.

**ಕೃಪೆ : ಕೈತುತ್ತು**

# ಉತ್ತಮ ಶಿಕ್ಷಕ ವಿ. ರಾಜ ಇನ್ನಿಲ್ಲ



ಆರ್‌ಎಸ್‌ಎಸ್‌ನ ಸ್ವಯಂಸೇವಕನಾಗಿ, ಹಿಮಾಚಲದಲ್ಲಿ ಒಂದು ವರ್ಷ ಪ್ರಚಾರಕರಾಗಿ ಕೆಲಸ ಮಾಡಿ ಅಲ್ಲಿನ ಸಂಸ್ಕಾರ ಮೈಗೂಡಿಸಿಕೊಂಡು ಶಿಕ್ಷಕನಾಗಲೇ ಬೇಕೆಂಬ ಇಚ್ಛೆಯಿಂದ ಶಿಕ್ಷಕನಾದ ವ್ಯಕ್ತಿ. ಕನ್ನಡದ ಉತ್ತಮ ಶಿಕ್ಷಕನಾಗಿ, ಸಂಪನ್ಮೂಲ ವ್ಯಕ್ತಿಯಾಗಿ ಎಲ್ಲರ ಪ್ರೀತಿ ವಿಶ್ವಾಸಗಳಿಸಿದರು. ಇಂತಹ ಒಳ್ಳೆಯ ಶಿಕ್ಷಕನ ಸೇವೆಯನ್ನು ನಮ್ಮ ಶಿಕ್ಷಕ ಸಂಘವು ಪಡೆದಿತ್ತು ಎನ್ನುವುದು ಹೆಮ್ಮೆಯ ವಿಷಯ. ಬೆಂಗಳೂರು ದಕ್ಷಿಣಜಿಲ್ಲೆಯ ಕಾರ್ಯದರ್ಶಿಯಾಗಿ ಕೆಲವು ವರ್ಷಗಳು ಪ್ರೌಢಶಾಲೆಯಲ್ಲಿ ಕನ್ನಡದ ಪ್ರಾಧ್ಯಾಪಕನಾಗಿ ಒಳ್ಳೆಯ ಸಂಪರ್ಕವನ್ನು ಹೊಂದಿದ್ದು, ಪರೀಕ್ಷಾ ಮಂಡಲಿ, ಪಠ್ಯಪುಸ್ತಕ ರಚನೆ, ಹಾಗೂ ಸಂಪನ್ಮೂಲವ್ಯಕ್ತಿಯಾಗಿ ಅಚ್ಚುಕಟ್ಟಾಗಿ ಕಾರ್ಯನಿರ್ವಹಿಸಿ ಒಳ್ಳೆಯ ಹೆಸರು ಪಡೆದಿದ್ದರು. ಶಿಕ್ಷಕ ಸಂಘದ ಮುಖವಾಣಿಯಾದ ಶಿಕ್ಷಕ ಸಮಾಚಾರ ಪತ್ರಿಕೆಯಲ್ಲಿ ಅನೇಕ ಬಾರಿ ಶಿಕ್ಷಣಕ್ಕೆ ಸಂಬಂಧಿಸಿದ ಲೇಖನಗಳನ್ನು ಬರೆಯುತ್ತಿದ್ದರು.

ದಿನಾಂಕ 31–12–2025ರಂದು ವಿ. ರಾಜರವರು ಭಗವಂತನ ಪಾದವನ್ನು ಸೇರಿದ್ದಾರೆ. ಪೂರ್ತಿ ಅರಳುವ ಮುನ್ನವೇ ಅಗಲಿದ ಅವರ ಆತ್ಮಕ್ಕೆ ಶಾಂತಿ ಸಿಗಲಿ ಅವರ ಕುಟುಂಬಕ್ಕೆ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ನೀಡಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇವೆ. ಶಿಕ್ಷಕ ಸಂಘದ ಎಲ್ಲರೂ ಅವರು ನೀಡಿರುವ ಸೇವೆಗೆ ಆಭಾರಿಯಾಗಿದೆ ಹಾಗೂ ವಿನಮ್ರ ಪೂರ್ವ ಶ್ರದ್ಧಾಂಜಲಿಯನ್ನು ಸಮರ್ಪಿಸುತ್ತಿದೆ.

**– ಶ್ರೀಮತಿ ಆರ್.ಸೀತಾಲಕ್ಷ್ಮಿ,**

ಪೋಷಕರು, ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ

# ಸಂಕಲ್ಪ ದಿನಾಚರಣೆ – ಬೆಂಗಳೂರು ಉತ್ತರ ಜಿಲ್ಲೆ (ಕರ್ತವ್ಯ ಬೋಧ್ ದಿವಸ್)



ದಿನಾಂಕ: 17.01–2026ರ ಶನಿವಾರ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕಸಂಘ, ಬೆಂಗಳೂರು ಉತ್ತರ ಜಿಲ್ಲೆಯ ವತಿಯಿಂದ ಭವ್ಯ ಭಾರತ ದೇಶ ಕಂಡಂತಹ ಶ್ರೇಷ್ಠ ಮಹಾನ್ ವ್ಯಕ್ತಿಗಳಾದ ಸ್ವಾಮಿ ವಿವೇಕಾನಂದರು ಹಾಗೂ ನೇತಾಜಿ ಸುಭಾಷ್ ಚಂದ್ರ ಭೋಸರವರು ಹಾಕಿಕೊಟ್ಟಂತಹ ಆದರ್ಶಗಳು ಮತ್ತು ಮೌಲ್ಯಯುತ ಜೀವನ ಪದ್ಧತಿ, ಇಡೀ ವಿಶ್ವಕ್ಕೆ ನಮ್ಮ ಭವ್ಯ ಸಂಸ್ಕೃತಿಯನ್ನು ಸಾರಿದ ರೀತಿಯಲ್ಲಿ ಒಂದು ಉತ್ತಮವಾದ ಸಮಾಜವನ್ನು ನಿರ್ಮಿಸುವಲ್ಲಿ ಶಿಕ್ಷಕರ ಮಹತ್ತರ ಪಾತ್ರವನ್ನು ಮಾದರಿಯಾಗಿ ಸಮರ್ಪಣೆ ಮಾಡುವ ನಿಟ್ಟಿನಲ್ಲಿ ಸಂಕಲ್ಪ ದಿನಾಚರಣೆಯನ್ನು ಬೆಂಗಳೂರಿನ ಅಮೃತಹಳ್ಳಿಯ ಗಂಗಮ್ಮ ದೇವಸ್ಥಾನದ ಬಳಿಯಿರುವ ಎಸ್.ಎಲ್.ವಿ ವಿದ್ಯಾನಿಕೇತನ ಶಾಲೆಯಲ್ಲಿ ವೈಶಿಷ್ಟ್ಯವಾಗಿ ಶಾಲೆಯ ಆಡಳಿತ ಮಂಡಳಿ, ಶಿಕ್ಷಕರು ಮತ್ತು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಕಾರ್ಯಕರ್ತರ ಸಮ್ಮುಖದಲ್ಲಿ ಆಚರಿಸಲಾಯಿತು.

ಎಸ್.ಎಲ್.ವಿ ವಿದ್ಯಾನಿಕೇತನ ಶಾಲೆಯ ಶಿಕ್ಷಕ ವೃಂದವು ವಿಘ್ನ ವಿನಾಶಕ ವಿನಾಯಕನ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮವನ್ನು ಪ್ರಾರಂಭಿಸಿದರು. ಬೆಂಗಳೂರು ಉತ್ತರ ಜಿಲ್ಲೆಯ ಪ್ರಧಾನ ಕಾರ್ಯದರ್ಶಿ ಶ್ರೀ ಕಿರಣ್ ಕುಮಾರ್.ಎಸ್‌ರವರು ವೇದಿಕೆಯ ಮೇಲಿನ ಗಣ್ಯರನ್ನು ಪರಿಚಯಿಸಿ ಸಭೆಯಲ್ಲಿ ಹಾಜರಿದ್ದ ಕಾರ್ಯಕರ್ತರು ಹಾಗೂ ಶಿಕ್ಷಕ ವೃಂದವನ್ನು ಹಾರ್ದಿಕವಾಗಿ ಸ್ವಾಗತಿಸಿದರು. ನಂತರ ವೇದಿಕೆಯಲ್ಲಿದ್ದ ಗಣ್ಯರು, ಪದಾಧಿಕಾರಿಗಳು ದೀಪ ಪ್ರಜ್ವಲನ ಮಾಡಿ ಸ್ವಾಮಿ ವಿವೇಕಾನಂದರು, ನೇತಾಜಿ ಸುಭಾಷ್ ಚಂದ್ರಭೋಸ್‌ರವರ ಭಾವಚಿತ್ರಗಳಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ ಮಾಸಪತ್ರಿಕೆಯ ಸಂಪಾದಕರು, ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಕಾರ್ಯಾಲಯ ಪ್ರಮುಖರಾದ ಶ್ರೀ.ಜೆ.ಎಂ ಜೋಶಿರವರು ತಮ್ಮ ಪ್ರಾಸ್ತಾವಿಕ ನುಡಿಯಲ್ಲಿ ಸಂಘವು ಪ್ರಾರಂಭವಾದಾಗಿನಿಂದ ನಡೆದು ಬಂದ ಹಾದಿ ಮತ್ತು ಮಾಧ್ಯಮಿಕ ಶಿಕ್ಷಕ ಸಂಘದ ಮುಖೇನ ಪ್ರತಿ ಶೈಕ್ಷಣಿಕ ವರ್ಷದಲ್ಲಿ ಹಮ್ಮಿಕೊಳ್ಳುವ ಕಾರ್ಯಕ್ರಮಗಳ ವಿವರಗಳನ್ನು ತಿಳಿಸಿದರು.

ಬೆಂಗಳೂರು ಉತ್ತರ ಜಿಲ್ಲೆಯ ಗೌರವಾಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ ಕೂಡಗಿರವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಎಲ್ಲರಿಗೂ ಸಂಕಲ್ಪ ಬೋಧನೆ ನಡೆಸಿಕೊಟ್ಟರು. ಕಾರ್ಯಕ್ರಮದ ಮುಖ್ಯ ವಕ್ತಾರರಾಗಿ ಆಗಮಿಸಿದ ಸ್ವದೇಶಿ ಜಾಗರಣ ಮಂಚ್‌ನ ಕರ್ನಾಟಕ ರಾಜ್ಯ ವಿಚಾರ ವಿಭಾಗ ಪ್ರಮುಖರಾದ ಶ್ರೀ ವಿಜಯಕೃಷ್ಣರವರು ಸ್ವಾಮಿ ವಿವೇಕಾನಂದರ ಬಗ್ಗೆ ತಿಳಿಸುತ್ತಾ ವೀರ ಸನ್ಯಾಸಿಯಾದ ವಿವೇಕಾನಂದರು ಹೇಗೆ ಭಾರತಾಂಬೆಯ ವೀರಪುತ್ರರಾದರು ಹಾಗೂ ಶಿಕ್ಷಕರಿಗೆ ಅವರ ಮೌಲ್ಯಗಳು, ಸಂದೇಶಗಳನ್ನು ತಿಳಿಸಿದರು. ಚಾರಿತ್ರ್ಯವಿಲ್ಲದ ಶಿಕ್ಷಣ ಅರ್ಥಹೀನ, ಪ್ರತಿಯೊಬ್ಬ ಶಿಕ್ಷಕ ವಿದ್ಯಾರ್ಥಿಗಳಲ್ಲಿನ ಪ್ರತಿಭೆಯನ್ನು ಹೊರತೆಗೆಯುವ ಶಿಲ್ಪಿಯಾಗಬೇಕು ಎಂದು ತಿಳಿಸಿದರು. ನೇತಾಜಿ ಸುಭಾಷ್ ಚಂದ್ರ ಬೋಸ್‌ರವರ ಆದರ್ಶ ವ್ಯಕ್ತಿತ್ವ, ಅವರು ದೇಶಕ್ಕೆ ನೀಡಿದ ಕೊಡುಗೆಯ ಬಗ್ಗೆ ವಿವರವಾಗಿ ತಿಳಿಸಿದರು.



ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ಎಸ್‌ಎಲ್‌ವಿ ವಿದ್ಯಾನಿಕೇತನ ಶಾಲೆಯ ಕಾರ್ಯದರ್ಶಿಗಳಾದ ಶ್ರೀಮತಿ ಚಂದ್ರಕಲಾ ವೆಂಕಟೇಶ್‌ರವರು ಸಂಕಲ್ಪ ದಿನ ಕಾರ್ಯಕ್ರಮವನ್ನು ಆಯೋಜಿಸಿದ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವನ್ನು ಅಭಿನಂದಿಸಿದರು. ಇಂದಿನ ವಿದ್ಯಾರ್ಥಿ ಸಮೂಹಕ್ಕೆ ಮುಂದಿನ ಭವಿಷ್ಯಕ್ಕೆ ಉತ್ತಮವಾದ ಗುರಿಯನ್ನು ಹೊಂದುವ ವಿಶ್ವಾಸವನ್ನು ಶಿಕ್ಷಕರು ಮೂಡಿಸಬೇಕೆಂದು ತಿಳಿಸಿದರು. ಶಿಕ್ಷಕ ವೃತ್ತಿಯು ಸಮಾಜದಲ್ಲಿ ಶ್ರೇಷ್ಠವಾದ ವೃತ್ತಿ, ಎಲ್ಲಾ ಶಿಕ್ಷಕರು ಸಮಾಜಕ್ಕೆ ಮಾದರಿಯಾಗಬೇಕು ಎಂದು ತಿಳಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಬೆಂಗಳೂರು ಉತ್ತರ ಹಾಗೂ ಗ್ರಾಮಾಂತರ ಜಿಲ್ಲೆಯ ವಿಭಾಗ ಪ್ರಮುಖರಾದ ಶ್ರೀ ಗಂಗಪ್ಪರವರು ಈಗಿನ ವಿದ್ಯಾರ್ಥಿಗಳಲ್ಲಿ ಮೌಲ್ಯಗಳು ಕ್ಷೀಣಿಸುತ್ತಿವೆ, ಶಿಕ್ಷಕರು ಇದನ್ನು ಅರಿತು ಸುಧಾರಿಸುವ ಕಾರ್ಯ ಮಾಡಬೇಕು ಎಂದು ತಿಳಿಸಿದರು. ಬೆಂಗಳೂರು ಉತ್ತರವಲಯ–4ರ ಕಾರ್ಯದರ್ಶಿಯಾದ ಶ್ರೀ ಮಂಜುನಾಥ್ ಟಿ.ಆರ್ ರವರು ವಂದನಾರ್ಪಣೆ ನಡೆಸಿಕೊಟ್ಟರು. ಕಾರ್ಯಕ್ರಮದ ನಿರೂಪಣೆಯನ್ನು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಬೆಂಗಳೂರು ಉತ್ತರವಲಯ–3ರ ಅಧ್ಯಕ್ಷರಾದ ಶ್ರೀ ಗಂಗಾಧರ ಎಂ. ವಿ. ರವರು ಉತ್ತಮವಾಗಿ ನಡೆಸಿಕೊಟ್ಟರು. ಸಾಮೂಹಿಕ ಶಾಂತಿಮಂತ್ರದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

ವರದಿ : ಶ್ರೀ ಗಂಗಾಧರ.ಎಂ.ವಿ, ಅಧ್ಯಕ್ಷರು, ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಬೆಂಗಳೂರು ಉತ್ತರ ವಲಯ–3



ಪ್ರಭಾರ ಮುಖ್ಯ ಶಿಕ್ಷಕರ ಭತ್ಯೆ ಪ್ರತಿ ತಿಂಗಳು ಪಾವತಿಸುವಂತೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಕಲಬುರಗಿ ಜಿಲ್ಲಾ ಘಟಕ ವತಿಯಿಂದ ಡಿಡಿಪಿಐ ಅವರಿಗೆ ಮನವಿ

MAG(3)/NPP/23/2020-21 Registered No. RNI 45459/85 Posted at Bangalore PSO Bangalore -560 026
Date of Publishing : 17-02-2026 Date of Posting 20th or 21st of every month Posted at Periodical Rate

# ಮಾಧ್ಯಮಿಕ ಶಿಕ್ಷಕ ಸಂಘದ ವತಿಯಿಂದ ದಿನದರ್ಶಿಕೆ ಬಿಡುಗಡೆ ಕಾರ್ಯಕ್ರಮ – ಬೀದರ್



ಶಿಕ್ಷಕರ ವಿವಿಧ ಬೇಡಿಕೆಗಳ ಈಡೇರಿಕೆಗೆ ಹೋರಾಟ ನಡೆಸಲಾಗುವುದು ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಅಮರನಾಥ ಪಾಟೀಲ ಹೇಳಿದರು. ನಗರದ ಸರಸ್ವತಿ ಶಾಲೆಯ ಗಿರಿಜಾ ಭವನದಲ್ಲಿ ಭಾನುವಾರ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ 2026ನೇ ಸಾಲಿನ ದಿನದರ್ಶಿಕೆ ಬಿಡುಗಡೆ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು. ಸಂವಿಧಾನದ ಕಲಂ 371(ಜೆ) ತಿದ್ದುಪಡಿ ಕಾಯ್ದೆ ಪರಿಣಾಮಕಾರಿ ಅನುಷ್ಠಾನ, ಪದೋನ್ನತಿ ಮತ್ತಿತರ ಬೇಡಿಕೆಗಳ ಈಡೇರಿಕೆಗಾಗಿ ಸರ್ಕಾರದ ಮೇಲೆ ಒತ್ತಡ ಹೇರಲಾಗುವುದು ಎಂದು ತಿಳಿಸಿದರು. ವಿಧಾನ ಪರಿಷತ್ ಸದಸ್ಯನಾಗಿದ್ದ ಅವಧಿಯಲ್ಲಿ ಶಿಕ್ಷಕರ ಅನೇಕ ಸಮಸ್ಯೆಗಳ ಪರಿಹಾರಕ್ಕೆ ಶ್ರಮಿಸಿದ್ದೆ ಎಂದು ಸ್ಮರಿಸಿದರು.

ಮಾಧ್ಯಮಿಕ ಶಿಕ್ಷಕ ಸಂಘ ಎಲ್ಲ ಶಿಕ್ಷಕರ ಸಂಘಗಳಿಗೆ ತಾಯಿ ಬೇರು ಇದ್ದಂತೆ. ಶಿಕ್ಷಕರ ಹಿತ ರಕ್ಷಣೆಯೇ ಸಂಘದ ಧ್ಯೇಯವಾಗಿದೆ ಎಂದು ದಿನದರ್ಶಿಕೆ ಬಿಡುಗಡೆ ಮಾಡಿ ಮಾತನಾಡಿದ ಸಂಘದ ರಾಜ್ಯ ಅಧ್ಯಕ್ಷ ಸಂದೀಪ್ ಬೂದಿಹಾಳ್ ಹೇಳಿದರು. ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಪರಮೇಶ್ವರ ಬಿರಾದಾರ ಅಧ್ಯಕ್ಷತೆ ವಹಿಸಿದ್ದರು. ಸಾಮಾಜಿಕ ಕಾರ್ಯಕರ್ತ ನಾಗರಾಜ ಕರ್ಪೂರ, ಪ್ರಾಚಾರ್ಯ ಶಿವಾನಂದ ಸಿಂಧನಕೇರಾ, ಸಂಘದ ರಾಜ್ಯ ಕಾರ್ಯಕಾರಿಣಿ ಸದಸ್ಯ ರಾಜಶೇಖರ ಮಂಗಲಗಿ, ಕಲಬುರಗಿ ವಿಭಾಗೀಯ ಪ್ರಮುಖ ಚಂದ್ರಶೇಖರ ಪಾಟೀಲ, ಕಲಬುರಗಿ ಅಧ್ಯಕ್ಷ ಸಂಜುಕುಮಾರ ಪಾಟೀಲ, ಜಿಲ್ಲಾ ಘಟಕದ ಗೌರವಾಧ್ಯಕ್ಷ ವಿಜಯಕುಮಾರ ಪಾಟೀಲ ಯರನಳ್ಳಿ, ರಾಜ್ಯ ಮುಖ್ಯೋಪಾಧ್ಯಾಯರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಪ್ರಶಾಂತ ರಾಗಾ, ಪ್ರೊ. ಸಿದ್ರಾಮಪ್ಪ ಮಾಸಿಮಾಡೆ, ಗಣಪತಿ ಸೋಲಪುರೆ, ಶಿವಕುಮಾರ ಉಪ್ಪೆ, ಸೂರ್ಯಕಾಂತ ಐನಾಪುರೆ, ಮನೋಹರ ಬಿರಾದಾರ, ಸಂತೋಷ್ ಸೋಲಪುರೆ, ಆನಂದ ಜಾಧವ್ ಮತ್ತಿತರರು ಇದ್ದರು. ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಜಿಲ್ಲಾ ಘಟಕದ ಗೌರವ ಸಲಹೆಗಾರ ಬಸವರಾಜ ಸ್ವಾಮಿ ಹೆಡಗಾಪುರ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಘದ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ರಮೇಶ ಪಾಟೀಲ ಸ್ವಾಗತಿಸಿದರು. ಉಪಾಧ್ಯಕ್ಷ ಲಕ್ಷ್ಮಣ ಪೂಜಾರಿ ನಿರೂಪಿಸಿದರು. ಖಜಾಂಚಿ ಸಂತೋಷ್ ಮಂಗಳೂರೆ ವಂದಿಸಿದರು.










1. ಯಾದಗಿರಿ ಜಿಲ್ಲೆಯ ಶಹಾಪುರ ತಾಲ್ಲೂಕಿನ ಚಾಮನಾಳದ ಕರ್ತವ್ಯ ಬೋಧ ದಿವಸ್ ಕಾರ್ಯಕ್ರಮ
2. ಹುಬ್ಬಳ್ಳಿಯಲ್ಲಿ ನಡೆದ ಕರ್ತವ್ಯ ಬೋಧ ಕಾರ್ಯಕ್ರಮ
3. ಕೇಂದ್ರ ಶಿಕ್ಷಣ ಸಚಿವರಾದ ಶ್ರೀ ಧರ್ಮೇಂದ್ರ ಪ್ರಧಾನ್ ಅವರನ್ನು ಭೇಟಿ ಮಾಡಿದ ಎ.ಬಿ.ಆರ್.ಎಸ್.ಎಂ. ನಿಯೋಗ

IF UNDELIVERED PLEASE RETURN TO SENDER

Printed By :
J. M. Joshi
Karnataka Rajya Madhyamika Shikshaka Sangha ®.)
Published By:
J. M. Joshi
Karnataka Rajya Madhyamika Shikshaka Sangha (R.)
Owned By : J. M. Joshi
on behalf of Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : J. M. Joshi, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com